CC-0. In Public Domain. Digitized by eGangotri

# ಪಿ.ಪಿ.ಲಿ/ಪಿ೦೩೨೦

ಅವರ

# ಮುದ್ದುಕೃಷ್ಣ

ಗುಬ್ಬಚ್ಚಿ ಪುಸ್ತಕಮಾರ

ಬೆಲೆ: ರೂ. 5-00

CC-O. In Public Domain. Digitized by eGangotri

# ಸೊಗಸು ಗೋಪಾಲ

ಸೊಗಸುಗೋಪಾಲನಿಗೆ ಶುಭಮಂಗಳಂ!
ಜಗದೇಕಮೋಹನಗೆ ಜಯಮಂಗಳಂ ॥ ೧ ॥

ಸಿರಿವೆತ್ತ ಮೆಲ್ಲಡಿಯ ಚೆಲ್ವಿಕೆಗೆ ಮಂಗಳಂ।
ತೆರೆಮಸಗುವುಗುರ ಕಾಂತಿಗೆ ಮಂಗಳಂ।
ಕರಮೆಸೆವ ಕಿರುದೊಡೆಯ ಗಾಡಿಗುರಿ ಮಂಗಳಂ।
ಸಿರಿಮಲಗುದೊಡೆವೊಗರ ಸೇರುವೆಗೆ ಮಂಗಳಂ ॥ ೨ ॥

ಪೊಸದೇಸೆಯಿಂದುಟ್ಟ ಪೊನ್ನುಡೆಗೆ ಮಂಗಳಂ।
ಬಿಸಜದಿಂದೆಸೆವ ನಾಭಿಗೆ ಮಂಗಳಂ।
ಮಿಸುಪ ಕೆಂಬರಲಿಂದೆ ಮೆರೆವೆರ್ದೆಗೆ ಮಂಗಳಂ।
ಒಸೆದು ಧರಿಸಿದ ತುಳಸಿಯೊಳುಸರಕೆ ಮಂಗಳಂ ॥ ೩ ॥

ಚೆಲುವ ಪಾರುಂಬಳೆಯ ಸಿಂಗರಕೆ ಮಂಗಳಂ।
ಬಲಮುರಿಯ ಸಂಕದೊಪ್ಪಕೆ ಮಂಗಳಂ।
ಉಲಿವ ಪೊಂಗೊಳಲ ಮೆಲ್ಲುಲಿಗಳಿಗೆ ಮಂಗಳಂ।
ನಲಿನಲಿವ ಮಕರಕುಂಡಲಗಳಿಗೆ ಮಂಗಳಂ ॥ ೪ ॥

ಮುಗುಳುನಗೆ ಬಗೆಗೊಳುವ ಮೊಗಸಸಿಗೆ ಮಂಗಳಂ।
ಪೊಗರುಗುವ ಕದಪಿನೋಜೆಗೆ ಮಂಗಳಂ।
ಮಗಮಗಿಪ ಉಸಿರ ಪರಿಮಳಕೆ ಮಿಗೆ ಮಂಗಳಂ।
ಬೊಗಸೆಗಣ್ಗಳ ತಣ್ಪುವಗೆಗಳಿಗೆ ಮಂಗಳಂ ॥ ೫ ॥

ಸಕಲಲೋಕವ ಪೊರೆವ ಸೈರಣೆಗೆ ಮಂಗಳಂ।
ಅಕಳಂಕಗುಣಸಮೂಹಕೆ ಮಂಗಳಂ।
ಚಿಕದೇವರಾಯನಿಗೆ ಚಿಂತಿತಾರ್ಥವನೀವ।
ಸುಕರಗೋಪಾಲನಿಗೆ ಕ್ಷೋಭನಂ ಮಂಗಳಂ ॥ ೬ ॥

Sri Vidyabharathi Book Centre, Sringeri

CC-O. In Public Domain. Digitized by eGangotri

# ಮುದ್ದು ಕೃಷ್ಣ

ಜಿ. ಪಿ. ರಾಜರತ್ನಂ

ಚಿತ್ರಕಾರರು :
ಎಂ. ಎಸ್. ಪುರುಷೋತ್ತಮರಾವ್

ಶಾಕ್ಯ ಸಾಹಿತ್ಯ ಮಂಟಪ
(ಡಾ॥ ಜಿ. ಪಿ. ರಾಜರತ್ನಂ ಸ್ಮಾರಕ)
ನಂ. 14/3, 17ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು - 560 055

Sri Vidyabharathi Book Centre, Sringeri

CC-O. In Public Domain. Digitized by eGangotri

(ಎಲ್ಲ ಹಕ್ಕುಗಳೂ ಶ್ರೀಧರ ರಾಜರತ್ನಂ ಅವರಿಗೆ ಸೇರಿವೆ)

ಮೊದಲನೆಯ ಮುದ್ರಣ :
ಶ್ರೀ ಕೃಷ್ಣಜನ್ಮಾಷ್ಟಮಿ
ಆಗಸ್ಟ್, ೧೯೫೧
ಎರಡನೆಯ ಮುದ್ರಣ : ಸೆಪ್ಟೆಂಬರ್, ೧೯೬೯
ಮೂರನೆಯ ಮುದ್ರಣ : ಡಿಸೆಂಬರ್, ೧೯೮೭

(ಇವರ ಕತೆ ೧೦ನೇ ಪುಟದಲ್ಲಿದೆ)

ಮುದ್ರಕರು :
ಬಿ. ಬಿ. ಡಿ. ಸಿ. ಸರಸ್ವತಿ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು ೫೬೦ ೦೫೩

Sri Vidyaratna Bharathi Book Centre, Bangalore

CC-O. In Public Domain. Digitized by eGangotri

# ಗೋಪಾಲ ಚೂಡಾಮಣಿ

**ಕಸ್ತೂರೀತಿಲಕಂ ಲಲಾಟಫಲಕೇ**
**ವಕ್ಷಃಸ್ಥಲೇ ಕೌಸ್ತುಭಂ**
**ನಾಸಾಗ್ರೇ ನವಮೌಕ್ತಿಕಂ ಕರತಲೇ**
**ವೇಣುಂ ಕರೇ ಕಂಕಣಂ**
**ಸರ್ವಾಂಗೇ ಹರಿಚಂದನಂ ಚ ಕಲಯನ್**
**ಕಂಠೇ ಚ ಮುಕ್ತಾವಲಿಂ**
**ಗೋಪಸ್ತ್ರೀಪರಿವೇಷ್ಟಿತೋ ವಿಜಯತೇ**
**ಗೋಪಾಲಚೂಡಾಮಣಿಃ**

ಹಲಗೆಯ ಹಾಗೆ ವಿಶಾಲವಾದ ಹಣೆಯಲ್ಲಿ ಕಸ್ತೂರಿಯ ತಿಲಕ,
ಎದೆಯ ಮೇಲೆ ಕೌಸ್ತುಭವೆಂಬ ರತ್ನ,
ಮೂಗಿನ ತುದಿಯಲ್ಲಿ ಹೊಸ ಮುತ್ತಿನ ಆಭರಣ,
ಅಂಗೈಯಲ್ಲಿ ಕೊಳಲು, ಕೈಯಲ್ಲಿ ಕಂಕಣ,
ಮೈಯ ತುಂಬ ಚಂದನವನ್ನು ಬಳಿದುಕೊಂಡಿದ್ದಾನೆ,
ಕುತ್ತಿಗೆಯಲ್ಲಿ ಮುತ್ತಿನ ಹಾರ,
ಸುತ್ತಲೂ ಗೋಪಸ್ತ್ರೀಯರು ಬಳಸಿ ಇದ್ದಾರೆ;
ಇಂತಹವನು
ಗೋಪಾಲರಿಗೆ ಚೂಡಾಮಣಿಯ ಹಾಗೆ ಇರುವವನು
ಶ್ರೀ ಕೃಷ್ಣನು ಗೆಲ್ಲುತ್ತಾನೆ.

ಮೇಲೆ ಕೊಟ್ಟಿರುವ ಸಂಸ್ಕೃತದ ಪದ್ಯವನ್ನು **ಲೀಲಾಶುಕ** ಎಂಬ ಕವಿ ಬರೆದನು. ಈತನ ಕಾವ್ಯದ ಹೆಸರು **'ಶ್ರೀ ಕೃಷ್ಣಕರ್ಣಾಮೃತ'**. ಇದರಲ್ಲಿ ಕೃಷ್ಣನನ್ನು ಕುರಿತು ನೂರಾರು ಪದ್ಯಗಳಿವೆ. ಕೆಲವು ಕೃಷ್ಣನ ರೂಪವನ್ನು ವರ್ಣಿಸುತ್ತವೆ, ಕೆಲವು ಕೃಷ್ಣನ ಗುಣಗಳನ್ನು ಕೊಂಡಾಡುತ್ತವೆ, ಇನ್ನು ಕೆಲವು ಅವನ ತುಂಟಾಟಗಳನ್ನು ಚಿತ್ರಿಸುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri


ಅವುಗಳಲ್ಲಿ ಕೃಷ್ಣನ ತುಂಟಾಟಗಳನ್ನು ತಿಳಿಸುವ ಕೆಲವು ಪದ್ಯಗಳಿಂದ ಐದನ್ನು ಪಾತ್ರ ಆಯ್ದುಕೊಂಡು, ಅವುಗಳನ್ನು ಮಕ್ಕಳಿಗೆ ಕತೆ ಹೇಳುವ ಹಾಗೆ ಬೆಳೆಸಿ ಹೇಳಿದ್ದೇನೆ.

ಶ್ರೀಕೃಷ್ಣನ ಬಾಲಲೀಲೆಗಳನ್ನು ಮಕ್ಕಳು ಸಾಮಾನ್ಯವಾಗಿ ಕೇಳಿರುತ್ತಾರೆ. ಉದಾಹರಣೆಗೆ: ಕೃಷ್ಣನು ಇನ್ನೂ ಮಗುವಾಗಿರುವಾಗಲೇ ಅವನು ಪೂತನಿಯನ್ನು ಕೊಂದದ್ದು, ಬಂಡಿಯನ್ನು ಒದ್ದು ಒಡೆದದ್ದು, ತೃಣಾವರ್ತನೆಂಬ ರಾಕ್ಷಸನನ್ನು ಕೊಂದದ್ದು, ವತ್ಸಾಸುರ ಬಕಾಸುರ ಅಘಾಸುರ ಧೇನುಕಾಸುರ ಮೊದಲಾದ ಇನ್ನಿತರ ರಾಕ್ಷಸರನ್ನು ಕೊಂದದ್ದು; ತಾಯಿ ತನ್ನನ್ನು ಒರಳು ಕಲ್ಲಿಗೆ ಕಟ್ಟಿದರೆ, ಅದನ್ನೂ ಎಳೆದುಕೊಂಡು ಹೋಗಿ, ಮನೆಯ ಮುಂದಿನ ಎರಡು ಅರ್ಜುನವೃಕ್ಷಗಳನ್ನು ಮುರಿದದ್ದು; ಬಾಯಿ ತೆರೆದು ತಾಯಿಗೆ ವಿಶ್ವರೂಪವನ್ನು ತೋರಿದ್ದು; ಕಾಳಿಯನೆಂಬ ಸರ್ಪದ ದರ್ಪವನ್ನು ಇಳಿಸಿದ್ದು—ಇವೇ ಮುಂತಾದ ಎಷ್ಟೋ ಅದ್ಭುತ ಕಾರ್ಯಗಳನ್ನು ಮಾಡಿದ್ದು ಮಾತ್ರವಲ್ಲ; ಅವನು ಬೆಣ್ಣೆ ಕದ್ದದ್ದು, ಹಾಲುಮೊಸರು ಕುಡಿದದ್ದು, ಮಡಕೆ ಒಡೆದು ಗೋಪಿಯರನ್ನು ಕೇಟಲೆ ಮಾಡಿದ್ದು, ಕರುಗಳನ್ನು ಬಿಚ್ಚಿ ಹಸುಗಳ ಬಳಿಗೆ ಬಿಟ್ಟದ್ದು—ಇಂತಹ ಎಷ್ಟೋ ತುಂಟಾಟಗಳನ್ನು ಆಡಿದನು.

ಲೀಲಾಶುಕನು ತಾನು ಕಂಡ ಶ್ರೀಕೃಷ್ಣನ ಕೆಲವು ಮುದ್ದು ತುಂಟಾಟಗಳನ್ನು ಒಂದೊಂದೇ ಪದ್ಯದಲ್ಲಿ ಸಂಸ್ಕೃತದಲ್ಲಿ ಹೇಳಿದ್ದಾನೆ. ಅದನ್ನೇ ಇಲ್ಲಿ ಕನ್ನಡದಲ್ಲಿ ವಿವರಿಸಲಾಗಿದೆ.

ಈ ಪದ್ಯಗಳು ಮಕ್ಕಳ ಬಾಯಿಗೆ ಬೆಣ್ಣೆಯಂತೆ ಸವಿಯಾಗಲಿ.

ಜಿ. ಪಿ. ರಾಜರತ್ನಂ

Sri Vidyabharathi Book Centre, Sringeri

CC-O. In Public Domain. Digitized by eGangotri

# ಬೆಣ್ಣೆಯುಂಡ ಹರಿ



'ಬೆಣ್ಣೆಗೆ ಕೈಯಿಕ್ಕಿದ ಹೊತ್ತು . . .'



Sri Vidyabharathi Book Centre, Sringeri

CC-O. In Public Domain. Digitized by eGangotri


ಕಸ್ತ್ವಂ ಬಾಲ ಬಾಲಾನುಜಃ ಕಮಿಹ ತೇ
ಮನ್ಮಂದಿರಾಶಂಕಯಾ
ಯುಕ್ತಂ ತನ್ನವನೀತಪಾತ್ರ ವಿವರೇ
ಹಸ್ತಂ ಕಿಮರ್ಥಂ ನ್ಯಸೇಃ
ಮಾತಃ ಕಂಚನ ವತ್ಸಕಂ ಮೃಗಯಿತುಂ
ಮಾಗಾ ವಿಷಾದಂ ಕ್ಷಣಾತ್
ಇತ್ಯೇವಂ ವರವಲ್ಲವೀಪ್ರತಿವಚಃ
ಕೃಷ್ಣಸ್ಯ ಪುಷ್ಣಾತು ನಃ

ಒಂದು ಸಲ ಕೃಷ್ಣ ಯಾರೋ ಗೋಪಿಯ ಮನೆಗೆ ಹೋಗಿ, ಬೆಣ್ಣೆ ಕದಿಯುವಾಗ ಸಿಕ್ಕಿಕೊಂಡಿದ್ದಾನೆ. 'ಯಾರೋ ನೀನು, ಹುಡುಗ?' ಎಂದು ಆ ಗೋಪಿ ಕೇಳಿದರೆ, ಕೃಷ್ಣ ಏನು ಹೇಳಿದ? ನಾನು ಕೃಷ್ಣ, ಎನ್ನಲಿಲ್ಲ; ಯಶೋದೆಯ ಮಗ, ಎನ್ನಲಿಲ್ಲ; ಬಲರಾಮನ ತಮ್ಮ, ಎಂದು ಹೇಳಿದ; 'ನನ್ನ ತಂಟಿಗೇನಾದರೂ ಬಂದರೆ, ಬಲನೆಂಬ ನಮ್ಮಣ್ಣ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ' ಎನ್ನುವ ಹಾಗೆ.

ಆಮೇಲೆ ಅವರವರಿಗೆ ಹೀಗೆ ಮಾತುಕತೆ ನಡೆಯಿತು:

'ಬಲನ ತಮ್ಮನಾದ ನೀನು ಇಲ್ಲಿಗೇಕೆ ಬಂದೆ?'

'ಇದು ನನ್ನ ಮನೆಯೆಂದು ತಪ್ಪು ತಿಳಿದು ಬಂದೆ.'

'ಆಗಬಹುದು. ಆದರೆ, ಈ ಬೆಣ್ಣೆಯ ಪಾತ್ರೆಯ ಒಳಗೆ ಏಕಪ್ಪಾ ಕೈಯಿಟ್ಟದ್ದು?'

'ಅಮ್ಮಾ, ಒಂದು ಕರು (ತಪ್ಪಿಸಿಕೊಂಡಿದೆ.) ಅದನ್ನು ಹುಡುಕುತ್ತಾ ಬಂದೆ. (ಇಲ್ಲಿಲ್ಲ. ನಾನು ಹೋಗುತ್ತೇನೆ.) ಇನ್ನು ಒಂದುಕ್ಷಣವೂ ನಿನಗೆ ಚಿಂತೆ ಬೇಡ.'

ಹೀಗೆಂದು ಆ ಗೊಲ್ಲರ ಹೆಣ್ಣಿಗೆ ಉತ್ತರಕೊಟ್ಟ ಕೃಷ್ಣನು ನಮ್ಮನ್ನು ಕಾಪಾಡಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

## ಬೆಣ್ಣೆಯುಂಡ ಹರಿ

ನೀರು ತರುವೆನೆಂದು ಗೋಪಿ
ಯಮುನೆಯ ಕಡೆಗೆ
ಹೊರಟೊಡನೆಯೆ ಎಲ್ಲಿರುವುದೊ
ಬೆಣ್ಣೆಯ ಗಡಿಗೆ–

ಎಂದು ಗೋಪಿ ಮುಚ್ಚಿಹೋದ
ಕದವನು ತೆಗೆದು
ಒಳಮನೆಯಲಿ ಹಾಲ್‌ಮೊಸರುಗ–
ಳೆಲ್ಲವ ಮೊಗೆದು–

ಬೆಣ್ಣೆಗೆ ಕೈಯಿಕ್ಕುವ ಸರಿ–
ಹೊತ್ತಿಗೆ ನೀರ
ತಂದವಳಾ ಗೋಪಾಲಿಕೆ
ಕಂಡ್ "ಎಲೆ ಪೋರ!

"ಯಾರವನೋ ನೀನ್?" ಎನ್ನಲು
"ಬಲನೆನ್ನಣ್ಣ!"
ಎಂದುದಕವಳೇನುಸಿರದೆ
ಪಿಳಿಪಿಳಿ ಕಣ್ಣ–

ತೆರೆದೆಂದಳು: "ಸರಿ. ನೀನೇ–
ಕಿಲ್ಲಿಗೆ ಬಂದೆ?"
ಎನಲ್ "ಆನೀ ಮನೆ ನನ್ನದೆ
ಎಂದೈತಂದೆ."

Sri Vidyabharathi Book Centre, Sringeri

CC-O. In Public Domain. Digitized by eGangotri



ಎನಲ್ "ಅಂತಿರಲೀ ಬೆಣ್ಣೆಯ
ಗಡಿಗೆಗೆ ಕೈಯ
ಮುಳುಗಿಸಿ ಹೆಗಲುದ್ದಕು–
ಇದು ಏಕಯ್ಯ ?"

ಕಳ್ಳತನಕ್ಕೆ ಬಂದು ಸಿಕ್ಕಿಹಾಕಿಕೊಂಡುಬಿಟ್ಟರುವಾಗ ಏನು ಹೇಳಬೇಕು, ಪಾಪ, ಕೃಷ್ಣ ? ಕೃಷ್ಣ ತುಂಟನಾದರೂ ತುಂಬ ಜಾಣ. ಆ ಕ್ಷಣದಲ್ಲಿಯೇ ಒಂದು ಇಲ್ಲದ ಕತೆ ಕಟ್ಟಿದ. ಅದನ್ನು ಕೇಳಿದ ಗೋಪಿ ನಿಜವೆಂದು ನಂಬಿಬಿಡುವ ಹಾಗೆ, ಮುದ್ದಾಗಿ, ಏನೂ ಅರಿಯದವನಂತೆ, ಹೇಳಿದ:

"ಓ! ಇದೆ ? ನಮ್ಮಾಕಳ ಕರು
ಬಿಳಿಯೆಳೆಯ ಮರಿ
ಇಲ್ಲಿರುವುದೊ ಎಲ್ಲಿರುವುದೊ
ಎಂದೆನಿತೊ ಪರಿ–

"ಹುಡುಕುತ ನಾ ಮನೆಮನೆಗೂ
ಅಲೆಯುತ ಬರುತ
ಕಂಡಿತೊ ಕರು ಏನೋ ಈ
ಬೆಣ್ಣೆಯ ಗುರುತ–

"ಎಂದರಸುತ ಬಂದವನೀ
ಗಡಿಗೆಯ ಬಾಯಿ
ಏನೆನುವುದೊ ಎನುತಿದ್ದೆನು.
ನಿಜವಿದೆ, ತಾಯಿ."

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಣ್ಣೆಗಾಗಿ ಬಂದ ಬಾಲ–
ಕೃಷ್ಣಮೂರುತಿ
ಇಂತು ನುಡಿದ ನುಡಿಗೆ ನಕ್ಕು
ಹೃದಯಪೂರುತಿ–

ಗೋಪಿ ಕರೆದಳವನ: "ಬಾರ!
ಬಾರ, ಮೋಹನಾ!
ಇಗೋ ಹಾಲು! ಇಗೋ ಬೆಣ್ಣೆ!
ಇಗೋ ತನುಮನಾ!"

ಬೆಣ್ಣೆಯುಂಡನಿಂತು ಹರಿ
ಗೋಪಿಯ ಕುಣಿಸಿ;
ನಮಗಂತೆಯೆ ಕರುಣಿಸಲಿ
ಶಾಂತಿಯನುಣಿಸಿ.

### ಕೆಲವು ಪದಗಳಿಗೆ ಅರ್ಥ

ಮೊಗೆ—ಕೈತುಂಬ ತುಂಬಿಕೊ. ಗೋಪಾಲಿಕೆ—ಗೊಲ್ಲರ ಹೆಣ್ಣು. ಪೋರ—ತುಂಟ. ಐತಂದೆ—ಬಂದೆ. ಆಕಳು—ಹಸು. ಎನಿತೊ ಪರಿ—ಎಷ್ಟೋ ರೀತಿಯಲ್ಲಿ. ಅರಸುತ—ಹುಡುಕುತ್ತ. ಮೂರುತಿ—ಮೂರ್ತಿ. ನುಡಿ—ಮಾತು. ಪೂರುತಿ—ಪೂರ್ತಿ, ತುಂಬಾ. ಮೋಹನ—ಕೃಷ್ಣ. ಕುಣಿಸಿ—ಸಂತೋಷವನ್ನು ಉಂಟುಮಾಡಿ. ಅಂತೆಯೆ—ಗೋಪಿ ಕೃಷ್ಣನಿಗೆ ಬೆಣ್ಣೆ ತಿನ್ನಿಸಿದ ಹಾಗೆ. ಉಣಿಸಿ—ತಿನ್ನಿಸಿ.

CC-O. In Public Domain. Digitized by eGangotri

## ಪೀಚಿದನು ಕೃಷ್ಣ

ಪೀಠೇ ಪೀಠನಿಷಣ್ಣಬಾಲಕಗಳೇ
ತಿಷ್ಠನ್ ಸ ಗೋಪಾಲಕೋ
ಯಂತ್ರಾಂತಃಸ್ಥಿತದುಗ್ಧಭಾಂಡಮವಕೃ–
ಷ್ಯಾಜ್ಘ್ರಿದ್ಯ ಘೆಂಟಾರವಮ್
ವಕ್ತ್ರೇಪಾಂತಕೃತಾಂಜಲೀಃ ಕೃತಶಿರಃ
ಕಂಪಂ ಪಿಬನ್ಯಃ ಪಯಃ
ಪಾಯಾದಾಗತ ಗೋಪಿಕಾನಯನಯೋಃ
ಗಂಡೂಷಫ್ಲೂತ್ಕಾರಕೃತ್

ಪೀಠದ ಮೇಲೆ ಪೀಠಗಳನ್ನು ಇಟ್ಟು ಏರಿದ
ಗೊಲ್ಲರ ಹುಡುಗನ ಹೆಗಲ ಮೇಲೆ ನಿಂತು,
ನೆಲುವಿನ ಒಳಗಿದ್ದ ಹಾಲಿನ ಮಡಕೆಗಳನ್ನು ಎಳೆದು,
ಅಲ್ಲಿ ಕಟ್ಟಿದ್ದ ಗಂಟೆಯ ಸದ್ದನ್ನು ಮುಚ್ಚಿ,
ತುಂಬಿದ ಜೊಗಸೆಯನ್ನು ಮುಖದ ಹತ್ತಿರಕ್ಕೆ ತಂದು
ಹಾಲನ್ನು ಕುಡಿದು ಮೆಚ್ಚಿ ತಲೆದೂಗುತ್ತಾ,
ಗೋಪಿಕೆ ಬಂದು ತನ್ನನ್ನು ಹಿಡಿದರೆ
ಬಾಯಲ್ಲಿ ತುಂಬಿದ್ದುದನ್ನು ಅವಳ ಕಣ್ಣುಗಳಿಗೆ
ಫ್ಲೂತ್ಕಾರಮಾಡಿದ
ಆ ಗೋಪಾಲಕನಾದ ಶ್ರೀ ಕೃಷ್ಣನು
ನಮ್ಮನ್ನು ಕಾಪಾಡಲಿ.

### ಕೆಲವು ಪದಗಳಿಗೆ ಅರ್ಥ

ನಿಲುವು—ಮಡಿಕೆ ಕುಡಿಕೆಗಳನ್ನು ನೇತುಹಾಕುವ ಹಗ್ಗದ ಬಲೆ. ಗಂಟೆ—ನಿಲುವನ್ನು ಮುಟ್ಟಿದರೆ, ಹಾಗೆ ಮುಟ್ಟಿದ್ದನ್ನು ತಿಳಿಸುವುದಕ್ಕಾಗಿ ಗೊಲ್ಲಿತಿಯರು ಕಟ್ಟಿದ್ದ ಗಂಟೆ. ಫ್ಲೂತ್ಕಾರ—ಬಾಯಲ್ಲಿ ತಂಬಿಕೊಂಡಿದ್ದ ದ್ರವವನ್ನು ಫ್ಲುರ್ರೆಂದು ತುಂತುರುತುಂತುರಾಗಿ ಉಗುಳಿಬಿಡುವುದು. ಇದೇ 'ಪೀಚುವುದು.'

Sri Vidyabharathi Book Centre, Sringeri

CC-O. In Public Domain. Digitized by eGangotri

# ಶ್ರೀ ಕೃಷ್ಣರಾತ್ರಿ



'ಕಣ್ಣೇ ಕಾಣದು, ರಾತ್ರೆಯಾಯಿತಮ್ಮ!'

Sri Vidyabharathi Book Centre, Sringeri

CC-O. In Public Domain. Digitized by eGangotri



ಮಾತಃ ಕಿಂ ಯದುನಾಥ ದೇಹಿ ಚಷಕಂ
ಕಿಂ ತೇನ ಪಾತುಂ ಪಯಃ
ತನ್ನಾಸ್ತ್ಯದ್ಯ ಕದಾಸ್ತಿ ವಾ ನಿಶಿ ನಿಶಾ
ಕಾ ವಾಽನ್ಧಕಾರೋದಯಃ
ಅನಿಮೀಲ್ಯಾಕ್ಷಿಯುಗಂ ನಿಶಾಪ್ಯುಪಗತಾ
ದೇಹೀತಿ ಮಾತುರ್ಮುಹುಃ
ವಕ್ಷೋಜಾಂಶುಕಕರ್ಷಣೋದ್ಯತಕರಃ
ಕೃಷ್ಣ ಸ್ಸ ಪುಷ್ಣಾತು ನಃ

ಒಂದು ಸಲ ಕೃಷ್ಣ ತುಂಬ ಹಠ ಹಿಡಿದನಂತೆ,

"ಅಮ್ಮಾ!"

"ಏನು, ಯದುಗಳ ದೊರೆಯೆ?"

"ಕುಡಿಯುವ ಬಟ್ಟಲು ಕೊಡು."

"ಅದು ಏಕೆ ನಿನಗೆ?"

"ಹಾಲು ಕುಡಿಯಲು ಬೇಕು."

"ಹಾಲು ಈಗ ಇಲ್ಲ."

"ಮತ್ತೆ ಯಾವಾಗ?"

"ರಾತ್ರೆ ಆದಾಗ."

"ರಾತ್ರೆ ಎಂಬುದು ಏನು?"

"ಅದು ಕಣ್ಣು ಕಾಣದ ಕತ್ತಲೆ ಹುಟ್ಟುವುದಕ್ಕೆ ಹೆಸರು."

ಆಗ, ತನ್ನ ಎರಡು ಕಣ್ಣುಗಳನ್ನೂ ಮುಚ್ಚಿ, "ರಾತ್ರಿಯಾಯಿತು. ಕೊಡು." ಎಂದು ಮತ್ತೆ ಮತ್ತೆ ತಾಯಿಯ ಎದೆಯ ಮೇಲಿನ ಸೆರಗನ್ನು ಎಳೆದು ಕಾಡಿದ ಆ ಕೃಷ್ಣನು ನಮ್ಮನ್ನು ಕಾಪಾಡಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

## ಶ್ರೀ ಕೃಷ್ಣರಾತ್ರಿ

ಕೃಷ್ಣ ಕಾಡಿದನು: "ಅಮ್ಮಾ! ಅಮ್ಮಾ!"
ತಾಯಿ ಕೇಳಿದಳು: "ಏನು ಮಗೂ?"
"ಆಣ್ಣ ಬಲಸಿಗೆ ನೆನ್ನೆ ರಾತ್ರೆ ನೀ
ಏನ ಕೊಟ್ಟೆ–ಅದ ಕೊಡು ನನಗೂ!"

"ಆಣ್ಣ ಬಲಸಿಗೆ ನೆನ್ನೆ ರಾತ್ರೆ ನಾ
ಏನ ಕೊಟ್ಟೆ, ಕಣ್ಣ?"
"ಕರೆದ ಹಾಲು ನೀ ಕೊಟ್ಟೆಯಂತೆ; ಸೊರೆ
ಚಂದ್ರನಂಥ ಬಣ್ಣ!"

"ಕರೆದ ಹಾಲೆ! ಓ, ನಿನಗು ಕೊಡುವೆ. ಹಸು
ಮನೆಗೆ ಬರಲಿ, ತಾಳು."
"ಮನೆಗೆ ಬಂದು ಹಸು ಮೇದು ಮೆಲಕುತಿವೆ.
ಗೊಲ್ಲ ಬಂದ, ಕೇಳು."

"ಗೊಲ್ಲ ಬಂದರೇನ್? ಎಲ್ಲ ಗೋವುಗಳು
ಮೇವು ಮುಗಿಸಲೇಳು.
ಸಂಜೆಗಾಗಲೇ ಏನು ಹಾಲು? ತಡೆ,
ರಾತ್ರೆಯಾಗಲೇಳು."

"ರಾತ್ರೆ ಎಂದರೇನಮ್ಮ? ರಾತ್ರೆಯನು
ಗುರುತು ಹಿಡಿವುದೆಂತು?"
"ರಾತ್ರೆ ಎಂದರದು ಕಾಳಕತ್ತಲೆ!
ಕಣ್ಣೇ ಕಾಣದಂತು!"

Sri Vidyabharathi Book Centre, Sringeri

CC-O. In Public Domain. Digitized by eGangotri



ಕೃಷ್ಣನಾಗ ಕಣ್ ಮುಚ್ಚಿ ಬಿಗಿ" ದಿದೋ
ಕತ್ತಲಾಯಿತಮ್ಮಾ!
ಕಣ್ಣೀ ಕಾಣದು, ಹಾಲು ಕರೆದು ತಾ,
ರಾತ್ರೆಯಾಯಿತಮ್ಮಾ!"

ಎಂದು ಕಾಡಲಾ ತಾಯಿ ಯಶೋದಾ
ನಕ್ಕು, ನೆಟಕೆ ಮುರಿದು,
ಕರೆದು, ತಂದಳು ಹೊನ್ನ ಬಟ್ಟಲಲಿ
ನೊರೆಯ ಹಾಲ ಸುರಿದು.

ಕೃಷ್ಣ ಕುಡಿದನಾ ನೊರೆಯ ಹಾಲನವ-
ನೆಳೆಯ ತುಟಿಯ ಸುತ್ತ
ಹೊಳೆದು ಹರಡಿದಾ ನಗೆಗೆ ನೀಗಲಿ
ನಮ್ಮ, ನಿಮ್ಮ, ಕುತ್ತ.

ಕೆಲವು ಪದಗಳಿಗೆ ಅರ್ಥ

ಕೃಷ್ಣರಾತ್ರಿ—ಕೃಷ್ಣನಿಗೆ ಸಂಬಂಧಿಸಿದ ರಾತ್ರಿ; ಕೃಷ್ಣ ಎಂದರೆ ಕಪ್ಪಾದ ರಾತ್ರೆ. ಕಾಡು—ಗೋಳುಹುಯಿದುಕೊ. ಬಲ—ಬಲರಾಮ. ಕಣ್ಣ—ಕೃಷ್ಣ ಎಂಬುದರ ಮುದ್ದುರೂಪ. ಚಂದ್ರನಂಥ ಬಣ್ಣ—ಅಷ್ಟು ಬಿಳುಪು. ಕಾಳ—ಕಪ್ಪಾದ. ನೆಟಿಕೆಮುರಿ—ಮಕ್ಕಳ ಮುದ್ದುತನ ತುಂಬ ಪ್ರಿಯವಾದರೆ, ಅವಕ್ಕೆ ದೃಷ್ಟಿ ತಾಕೀತೆಂಬ ಭೀತಿಯಿಂದ, ಅವ್ವಗಳ ಮುಖವನ್ನು ಸವರಿ ತಮ್ಮ ಹಣೆಗೆನ್ನೆಯ ಮೇಲೆ ನೆಟಕೆ ಮುರಿಯುವುದು. ನೀಗಲಿ—ಕಳೆದುಹೋಗಲಿ. ಕುತ್ತ—ಕೇಡು.

Sri Vidyabharathi Book Centre, Sringeri

CC-O. In Public Domain. Digitized by eGangotri

# ಕೃಷ್ಣ ಕುಡಿದ ಗುಟುಕು

'ಆಳೆದರೆ—ಮೊದಲಿನಂತೆ ನೊಟಕು!'

Sri Vidyabharathi Book Centre, Sringeri

CC-O. In Public Domain. Digitized by eGangotri



ಕಾಲಿಂದೀಪುಲಿನೋದರೇಷು ಮುಸಲೀ
ಯಾವದ್ಗತಃ ಖೇಲಿತುಂ
ತಾವತ್ ಕಾರ್ಷರಿಕಂ ಪಯಃ ಪಿಬ ಹರೇ
ವರ್ಧಿಷ್ಯತೇ ತೇ ತನೌ
ಇತ್ಥಂ ಬಾಲತಯಾ ಪ್ರತಾರಣಪರಾಃ
ಶ್ರುತ್ವಾ ಯಶೋದಾ ಗಿರಃ
ಪಾಯನ್ನಸ್ಯಾ ಶಿಖಾಂ ಸ್ಪೃಶನ್ ಸ್ಮಮುದಿತಃ
ಕ್ಷೀರೇಽರ್ಧಪೀತೇ ಹರಿಃ

ಹಿಂದೆ, ಒಂದು ಸಲ, ಕೃಷ್ಣ ಹಗಲು ಮುಗಿಯುವ ಮೊದಲೇ ಹಾಲು ಬೇಕೆಂದು ಹಠ ಹಿಡಿದುದನ್ನು 'ಶ್ರೀಕೃಷ್ಣರಾತ್ರಿ' ಎಂಬ ಪದ್ಯದಲ್ಲಿ ಓದಿದ್ದೀರಿ.

ಇನ್ನೊಂದು ಸಲ ಏನಾಯಿತಂತೆ: 'ಹಾಲು ಕುಡಿ' ಎಂದು ಬಟ್ಟಲು ತುಂಬಿಕೊಟ್ಟರೆ, ಕುಡಿಯಲು ತಂಟೆ ಮಾಡಿದನಂತೆ.

ಆಗ ತಾಯಿಯಾದ ಯಶೋದಾ ಹೇಳಿದಳಂತೆ: "ನಿನ್ನ ಅಣ್ಣನಾದ ಬಲರಾಮ ಕಾಳಿಂದೀ ನದಿಯ ದಡದ ಮರಳಿನಲ್ಲಿ ಆಡುವುದಕ್ಕೆ ಹೋಗಿದ್ದಾನೆ. ಅವನು ಬರುವಷ್ಟರಲ್ಲಿ ಈ ಬಟ್ಟಲಿನ ಒಳಗಿರುವ ಹಾಲನ್ನು ಕುಡಿದುಬಿಡಪ್ಪ. ಕುಡಿದರೆ, ನಿನ್ನ ತಲೆಯ ಕೂದಲು ಬೆಳೆಯುತ್ತದೆ." ಎಂದಳಂತೆ.

ಕೃಷ್ಣನು ಇನ್ನೂ ಹುಡುಗನಾಗಿದ್ದುದರಿಂದ, ತಾಯಿ ತನಗೆ ಹಾಲು ಕುಡಿಸುವುದಕ್ಕಾಗಿ ಹೇಳಿದ ಮಾತನ್ನು ನಿಜವೆಂದೇ ಭಾವಿಸಿದನಂತೆ.

ತಾಯಿ ಕೊಟ್ಟ ಹಾಲನ್ನು ಸಂತೋಷದಿಂದ ಕುಡಿದು, ಕೂದಲು ಬೆಳೆದಿದೆಯೇ ಎಂದು ಮುಟ್ಟಿ ನೋಡಿಕೊಂಡನಂತೆ.

'ಇಂತಹ ಹರಿಯು ನಮ್ಮನ್ನು ಕಾಪಾಡಲಿ' ಎಂದು ಲೀಲಾಶುಕನು ಪ್ರಾರ್ಥಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri


" ಹಾಲು ಕುಡಿಯಲೇನಿಷ್ಟು ತಂಟೆ, ಮಗು!
ಕುಡಿ ಕುಡಿ, ಕೃಷ್ಣಾ, ಬೇಗ ಕುಡಿ!
ಕೈಯ ತಳ್ಳದಿರು, ಹಾಲು ಚೆಲ್ಲದಿರು!
ಬಿಸಿ ಬಿಸಿ ನೊರೆಹಾಲ್! ಹೀರಿ ಕುಡಿ!

" ಕುಡಿದರಿದೆಕೊ ನಿನಗೊಳ್ಳಿ ಬಟ್ಟೆ ಉಡಿಸಿ,
ಮಿರುಗುವ ಆಭರಣವ ತೊಡಿಸಿ,
ಹೂವುಹಗುರ ಹೊಸ ಕೊಳಲ ತರಿಸಿ ಕೊಡಿಸಿ,
ಕಳಿಸುವೆ ನವಿಲುಗರಿಯ ಮುಡಿಸಿ

" ಹೆಗಲ ಮೇಲೆ ಕಿರುನೇಗಿಲೆತ್ತಿ ಬಲ–
ರಾಮನು ಬರುವನು ಇಷ್ಟರಲೆ!
ಅಣ್ಣ ಬರುವ ಮೊದಲ್ ಅಣ್ಣೆವಾಲನಿದ
ನೀನೆ ಮುಗಿಸಿಬಿಡು ಅಷ್ಟರಲೆ!

" ಒಂದೆ ಗುಟುಕು! ಇಕೊ! ಗುಮ್ಮ ಬಂದನಕೊ!
ಮನೆಗೆ ಬರಲಿ ತಾಳಪ್ಪ, ತಂದೆ ನಂದ!
ಸಾಮ ದಾನಗಳು ಭೇದ ದಂಡಗಳು
ಎಲ್ಲ ವ್ಯರ್ಥ! ನಿನಗೇನು ಕೃಷ್ಣ ಚಂದ?"

ಕೃಷ್ಣನದಕೆ ತಲೆ ಕೊಡಹಿ ಕೇಳಿದ:
" ಹೇಳು, ತಾಯಿ, ನೀ ತುಂಬ ಬುದ್ಧಿವಂತೆ.
ಹಾಲು ಕುಡಿದರೆನಗೇನು ಲಾಭವೋ?
ಹೇಳು, ಕುಡಿದರೆನಗೇನು ಸಿದ್ಧಿಯಂತೆ?"

CC-O. In Public Domain. Digitized by eGangotri

ತಲೆಯ ಕೊಡಹಿ ಸಿರಿಮುಖದ ಮೇಲೆ ಕರಿ–
ಕೂದಲ ಪರದೆಯನಿಳಿಬಿಟ್ಟು
ಮರೆಗೆ ನಿಂತು ಮಿಣುಮಿಣುಕುವ ಕಂಗಳ
ತುಂಟನಗೆಯ ಕಂಡ್ "ಎಲೆ ಕಿಟ್ಟು,

"ಮರದ ಮೆಲುಗಡೆ ಚಿಗುರು ಮೊಳೆಯುವುದು
ನೀರು ಹೀರಿದರೆ ತಾಯ್‌ಬೇರು!
ನಿನಗೆ ಬೆಳೆಯುವುದು ತಲೆಯ ಕೂದಲು–
ಹಾಲು ಹೀರಿದರೆ-ಮೊಳ ಮೂರು!"

ಕೃಷ್ಣ ಗಬಗಬಾ ಬಟ್ಟಲೆತ್ತಿ ತಾ
ಹೀರಿದ–ಕುಡಿದನೊಂದೆ ಗುಟುಕು!
ಮುಖದ ಮುಂದೆ ತಲೆಗೂದಲು ಹಿಡಿದು
ಅಳೆದರೆ–ನೊದಲಿನಂತೆ ನೊಟಕು!

ತಾಯಿ ಪಕಪಕಾ ನಕ್ಕು ನಲಿದಳಾ
ಕೃಷ್ಣಬಾಲಕನ ಮುದ್ದಾಡಿ.
ಕೃಷ್ಣ ತಾನವಳನಿಂತು ನಗಿಸಿದ—
ಹಾಲು ಕುಡಿಯಲಿಕೆ ಒದ್ದಾಡಿ!

**ಕೆಲವು ಪದಗಳಿಗೆ ಅರ್ಥ**

ನಿರುಗುವ—ಹೊಳೆಯುವ. ಹೂವುಹಗುರ—ಹೂವಿನಂತೆ ಹಗುರ. ಮುಡಿಸಿ—ತಲೆಗೆ ಸಿಕ್ಕಿಸಿ. ಅಣ್ಣೆವಾಲು—ಅಸ್ಸಟ ಹಾಲು. ಸಾಮ—ಒಳ್ಳೆಯ ಮಾತು. ವಾನ—ಅದು ಇದು ಕೊಡುವೆನೆಂದು ಆಸೆ ತೋರಿಸುವುದು. ಭೇದ—ಅಣ್ಣನು ಬಂದು ಕುಡಿದುಬಿಡುತ್ತಾನೆ ಎಂಬುದು. ದಂಡ—ಹೆದರಿಸುವುದು. ಸಿದ್ಧಿ—ಪ್ರಯೋಜನ. ಸಿರಿಮುಖ—ಕಳೆಯಿಂದ ಕೂಡಿದ ಮುಖ. ಗಬಗಬಾ—ಬೇಗಬೇಗ. ನೊಟಕು—ನೋಟು, ಉದ್ದ ಕಡಮೆಯಾದದ್ದು.

Sri Vidyabharathi Book Centre, Sringeri

CC-O. In Public Domain. Digitized by eGangotri

# ಮಾರಿದಳು ಗೋಪಿ



'ಬೇಕೆ ಗೋಪಾಲ! ಬೇಕೆ ಸಿರಿಲೋಲ!'

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಕ್ರೀತುಕಾಮಾ ಕಿಲ ಗೋಪಕನ್ಯಾ
ಮುರಾರಿಪಾದಾರ್ಪಿತಚಿತ್ತವೃತ್ತಿಃ
ದಧ್ಯಾದ್ಯಧಿಕಂ ಮೋಹವಶಾದವೋಚತ್
ಗೋವಿಂದ ದಾಮೋದರ ಮಾಧವೇತಿ

ಈ ಮೇಲಿನ ಪದ್ಯವನ್ನು ಹಾಡಿದ ಲೀಲಾಶುಕ ತನ್ನ 'ಕೃಷ್ಣ ಕರ್ಣಾಮೃತ'ದ ಕೊನೆಗೆ ಹೇಳುತ್ತಾನೆ:

ಕೃಷ್ಣಾನುಸ್ಮರಣಾದೇವ ಪಾಪಸಂಘಾತಪಂಜರಃ
ಶತಧಾ ಭೇದಮಾಯಾತಿ ಗಿರಿರ್ವಜ್ರಹತೋ ಯಥಾ

ಬೆಟ್ಟದ ಮೇಲೆ ವಜ್ರದ ಏಟು ಬಿದ್ದರೆ ಹೇಗೋ ಹಾಗೆ, ಕೃಷ್ಣನನ್ನು ಸ್ಮರಿಸಿದ ಅಷ್ಟರಿಂದಲೇ ಪಾಪಗಳ ಸಮೂಹದಿಂದಾದ ಪಂಜರವು ನೂರುಚೂರಾಗಿ ಒಡೆದು ಬೀಳುತ್ತದೆ.

ಹೀಗೆಂದು ಹಿಂದಿನ ಕಾಲದಲ್ಲಿ ಒಬ್ಬ ಗೋಪಿ ತಾನೂ ನಂಬಿ, ತನ್ನ ಚಿತ್ತವೃತ್ತಿಯನ್ನು ಮುರಾರಿಯ ಪಾದಗಳಲ್ಲಿ ಅರ್ಪಿಸಿದ್ದಳು.

ಒಂದು ಸಲ ಅವಳು ಹಾಲು ಮೊಸರುಗಳನ್ನು ಮಾರಲು ಹೊರಟಳು. ಆದರೆ ಹಾಲು ಮೊಸರುಗಳಿಗಿಂತ ಹೆಚ್ಚಾಗಿ ಕೃಷ್ಣನ ಮೇಲೆಯೇ ಮೋಹ ವಿದ್ದುದರಿಂದ—

'ಹಾಲೂ! ಮೊಸರೂ!'

ಎಂದು ಕೂಗುವುದಕ್ಕೆ ಬದಲಾಗಿ ಆ ಗೋಪಿಯು

'ಗೋವಿಂದಾ! ದಾಮೋದರಾ! ಮಾಧವಾ!'

ಎಂದು ಕೂಗಿಕೊಂಡು ಹೋದಳಂತೆ!

CC-O. In Public Domain. Digitized by eGangotri


ಕೂಗಿದಳು ಗೋಪಿ
ಪಿಡುಕೆ ಮುಂಗೋಪಿ;
ಮಗಳು ಮುಂಜಾವದಲೆ ಕೃಷ್ಣನ
ಕೂಡೆ ಸರಸವನಾಡುತ
ಮನೆಯ ಕೆಲಸವ ಮರೆತು ಸುಮ್ಮನೆ
ಅಲೆಯುವುದ ತಾ ನೋಡುತ—

"ಸಾಕು, ಬಾ ಬಾಲೆ,
ಕಣ್ಣುಮುಚ್ಚಾಲೆ.
ಹೆತ್ತ ಮೊಸರನು ಕಡೆಯಬೇಡವೆ?
ಕಳ್ಳಹೆಣ್ಣೇ! ಓಡಿ ಬಾ!
ಮಾರುತಿರುವರು ಓರಗೆಯ ಹೆಣ್-
ಮಕ್ಕಳೆಲ್ಲಾ! ನೋಡು ಬಾ!"

ಹುಡುಗಿ ಚಿಕ್ಕವಳಾದರೂ ತಾಯಿಗೆ ತುಂಬ ವಿಧೇಯಳಾದವಳು. ಆದ್ದರಿಂದ ಮನೆಗೆ ಬಂದಳು. ಆದರೆ, ಅವಳಿಗೆ ಕೃಷ್ಣನಲ್ಲಿ ಸ್ನೇಹ. ಆದರಿಂದ ದೇಹ ಹಿಂದಿರುಗಿದರೂ ಮನಸ್ಸು ಮಾತ್ರ ಕೃಷ್ಣನ ಜೊತೆಗೇ ನಿಂತಿತು.

ತಾಯ ಮಾತತ್ತ!
ಕೃಷ್ಣನೊಲವಿತ್ತ!
ಓಡಿದಳು ಮನೆಯೆಡೆಗೆ ಹೇಳುತ:
"ಕೃಷ್ಣ! ಕೃಷ್ಣಾ! ಹರಿ! ಹರೀ!"
ಕೃಷ್ಣನನೆ ನೆನೆಯುತ್ತ ಕಡೆದಳು—
ಬೆಣ್ಣೆ ತೇಲಿತು ಹಿರಿಹಿರಿ!

CC-O. In Public Domain. Digitized by eGangotri

ಕೂಗಿದಳು ತಾಯಿ:
"ನಿನ್ನ ತಲೆಕಾಯಿ!
ಮಂತ್ರವೇನಿದು, ಮರುಳೆ! ಮುಗಿಯಿತು
ಮಂಥನಕ್ರಿಯೆ, ಕಾಣೆಯ!
ಮಾರು, ನಡೆನಡೆ! ಎಲ್ಲಿ, ನೋಡುವ—
ನಿನ್ನ ಚುರುಕನು, ಜಾಣೆಯ!"

ಅವಳ ಕೈಯೇನೋ ತಾಯಿ ಹೇಳಿದಂತೆ ಮೊಸರು ಕಡೆಯಿತು, ಮೈಯೇನೋ ಮಾರುವುದಕ್ಕೆ ಮಡಕೆ ಕುಡಿಕೆಗಳನ್ನು ಹೊತ್ತು ಕೊಂಡಿತು. ಆದರೆ, ಮನಸ್ಸಿನಲ್ಲಿ ಒಂದೇ—ಕೃಷ್ಣನ ಸ್ಮರಣೆ! ಮಾತಿನಲ್ಲಿ ಒಂದೇ—ಕೃಷ್ಣನ ಹೆಸರು!

ಹಾಲಿನಲಿ ಹೊಕ್ಕು
ಮೊಸರಿನಲಿ ಸಿಕ್ಕು
ಬೆಣ್ಣೆಯೊಳಗೆಲ್ಲೆಲ್ಲು ವ್ಯಾಪಿಸಿ
ಆ ಮಗಳ ಮನಸು-
ಹೊಕ್ಕ ಕಡೆ ತಾನೊಂದೆ ಕಂಡಿತು:
ಕೃಷ್ಣನಾ ಕನಸು.

ಹಾಲು ಅದರಲ್ಲಿ!
ಮೊಸರು ಇದರಲ್ಲಿ!
ಮೇಲು ಮಡಕೆಯ ತುಂಬ ತಾ ತೆಗೆ-
ಮುಂಡೆ ನವನೀತ!
ಹೊತ್ತು ಹೊರಟಳು—ಕೂಗಿಕೊಳುತ
ಮಾಧವನ ಗೀತ!

CC-O. In Public Domain. Digitized by eGangotri

"ಬೇಕೆ ಗೋಪಾಲ!
ಬೇಕೆ ಸಿರಿಲೋಲ!
ಮುರಹರನ ನೀವ್ ಕೊಳ್ಳಿ! ಕಾಳಿಂ-
ಗಾಂತಕನ ಕೊಳ್ಳಿ!
ಧೇನು, ಬಕ, ಪೂತನಿಯ ಶಕಟರ
ಕೊಂದನನ ಕೊಳ್ಳಿ!

"ಮೊಸರು ಕದ್ದವನ
ಬೆಣ್ಣೆ ಮೆದ್ದವನ
ಹಾಲುಗಡಿಗೆಯ ಒಡೆದ ಬಾಲನ
ಕೊಳ್ಳುವವರಾರೋ!
ಗೋಪಿಯರ ಈ ಪ್ರಾಣಪದಕವ
ಕೊಳ್ಳುವವರಾರೋ!"

ಮಗಳು ಮನೆಯ ಕೆಲಸ ಮಾಡುತ್ತಿಲ್ಲ, ಆಟವಾಡುತ್ತ ಇದ್ದಾಳೆ, ಎಂದು ತಾಯಿ ಏನೋ ಮೊದಲು ಸಿಡುಕಿದಳು. ಆದರೆ, ಮಗಳು ತಾನು ಹೇಳಿದ ಕೆಲಸವನ್ನು ತಪ್ಪದೆಮಾಡಲು ಯತ್ನಿಸಿದರೂ, ಅವಳ ಮನಸ್ಸು ಮಾತ್ರ ಕೃಷ್ಣನನ್ನು ಮರೆಯದಿರಲು, ಅವಳೂ ಕರಗಿದಳು.

ಕೇಳಿದಳು ಗೋಪಿ;
ನಕ್ಕು, ನಸುಕೋಪಿ:
"ಲೇಸು, ನೀ ಮಾರಿಡುವ ರೀತಿ;
ಸಾಕು, ಬಾ ಮಗಳೆ.
ಹಾಲು ಮೊಸರನು ಹರಹಿ ಕೂಗದೆ—
ಏನು ಈ ರಗಳೆ?

Sri Vidyabharathi Book Centre, Sringeri

CC-O. In Public Domain. Digitized by eGangotri

" ಹೋಗು, ನೀ ಹೋಗು.
ಆಡಿಕೋ, ಹೋಗು.
ನಾನೆ ಹೋಗುವೆ, ಮಾರಿಬರುವೆ,
ಮನೆಯ ಕಡೆ ಜೋಕೆ!
ಇದೆ ಕೊ! ಕೃಷ್ಣನ ಕರೆದು, ತಿನ್ನಿಸು.
ಬೆಣ್ಣೆಯಿದು ಸಾಕೆ?"

ಎಂದವಳ ಕೂಗಿ
ತೆರಳೆಗಳ ತೂಗಿ
ಕೊಟ್ಟುಹೋದುದ ಕಂಡ ಕೃಷ್ಣ
ನಮ್ಮ ಕಷ್ಟದಲಿ
ಬಂದು, ಬೆಣ್ಣೆಯ ಮುಗಿಸಿದಂತೆಯೆ
ಮುಗಿಸಿ ರಕ್ಷಿಸಲಿ.

### ಕೆಲವು ಪದಗಳಿಗೆ ಅರ್ಥ

ಮುಂಗೋಪ—ಮಾತಿಗೆ ಮುಂಚೆ ಕೋಪ. ಹೆತ್ತ—ಹೆಪ್ಪುಹಾಕಿದ. ಓರಗೆಯ—ಜೊತೆಯ. ಒಲವು—ಪ್ರೀತಿ. ಮರುಳೆ—ಹುಚ್ಚಿ. ಮಂಥನ ಕ್ರಿಯೆ—ಕಡೆಯುವ ಕೆಲಸ. ಚುರುಕು—ಬೇಗ ಬೇಗ ಜೆನ್ನಾಗಿ ಕೆಲಸ ಮಾಡುವ ಗುಣ. ನವನೀತ—ಬೆಣ್ಣೆ. ಮಾಧವ—ಕೃಷ್ಣ. ಗೀತ - ಹಾಡು. ಸಿರಿಲೋಲ—ಶ್ರೀಲೋಲ. ಕಾಳಿಂಗಾಂತಕ—ಕಾಳಿಂಗ ಸರ್ಪವನ್ನು ತುಳಿದವನು. ಧೇನು—ಹಸುವಿನ ಆಕಾರದ ರಾಕ್ಷಸ. ಬಕ—ಬಕಾಸುರ. ಶಕಟ—ಬಂಡಿ. ಮಾರಿಡು—ಮಾರಾಟಮಾಡು. ಹರಹು—ಸ್ಪಷ್ಟವಾಗಿ. ರಗಳೆ—ಕೆಲಸಕ್ಕೆ ಬಾರದ ಕೂಗು. ತೆರಳೆ—ಉಂಡೆಮಾಡಿದ ತುತ್ತು. ಮುಗಿಸಿ—ಕಷ್ಟಗಳನ್ನು ಮುಗಿಸಿ.

Sri Vidyabharathi Book Centre, Sringeri

CC-O. In Public Domain. Digitized by eGangotri

'ತಾಯಿ ಹೇಳಿದಳು ರಾಮನ ಕತೆಯ'

Sri Vidyabharathi Book Centre, Sringeri

CC-O. In Public Domain. Digitized by eGangotri



ರಾಮೋ ನಾಮ ಬಭೂವ ಹುಂ ತದಬಲಾ
ಸೀತೇತಿ ಹುಂ ತಾಂ ಪಿತು-
ರ್ವಾಚಾ ಪಂಚವಟೀತಟೇ ವಿಹರತಃ
ತಸ್ಯಾಹರದ್ರಾವಣಃ
ನಿದ್ರಾರ್ಥಂ ಜನನೀಕಥಾಮಿತಿ ಹರೇಃ
ಹುಂಕಾರತಃ ಶ್ರುಣ್ವತಃ
ಸೌಮಿತ್ರೇ ಕ್ವ ಧನುರ್ಧನುರ್ಧನುರಿತಿ
ವ್ಯಗ್ರಾ ಗಿರಃ ಪಾತು ವಃ

"ರಾಮ ಎಂಬವನು ಇದ್ದ."

"ಹುಂ!"

"ಸೀತಾ ಎಂದು ಅವನ ಹೆಂಡತಿ!"

"ಹುಂ!"

"ಅವರು ತಂದೆಯ ಮಾತಿನಂತೆ ಪಂಚವಟಿಯ ಅಂಚಿನಲ್ಲಿ ವಿಹರಿಸುತ್ತಿರುವಾಗ, ಅವಳನ್ನು ರಾವಣನು ಅಪಹರಿಸಿದನು!"

—ಮಗುವಿಗೆ ನಿದ್ರೆ ಬರಲೆಂದು ತಾಯಿ ಹೀಗೆ ಕಥೆ ಹೇಳುತ್ತಿದ್ದರೆ, "ಹುಂ! ಹುಂ!" ಎಂದು ಕಥೆ ಕೇಳುತ್ತಿದ್ದ ಹರಿಯು "ಸೌಮಿತ್ರಿ! ಎಲ್ಲಿ ಧನುಸ್ಸು? ಧನುಸ್ಸು? ಧನುಸ್ಸು?" ಎಂದು ಆವೇಶದಿಂದ ಕೂಗಿಕೊಂಡನು.

ಆ ಆವೇಶದ ಮಾತು ನಿಮ್ಮನ್ನು ಕಾಪಾಡಲಿ.

ಈ ಜನ್ಮದಲ್ಲಿ ಕೃಷ್ಣನಾಗಿದ್ದವನೇ ಹಿಂದಿನ ಜನ್ಮದಲ್ಲಿ ರಾಮನಾಗಿದ್ದನು, ಎಂಬ ಅಭೇದಭಾವವನ್ನು ಈ ಪದ್ಯ ಬಹು ಸ್ವಾರಸ್ಯವಾಗಿ ತಿಳಿಸುತ್ತದೆ. ಇದರ ಜೊತೆಗೆ ಕೃಷ್ಣ ಕಳವಳದಿಂದ ಕೂಗಿದ್ದಕ್ಕೆ ಇನ್ನೂ ಒಂದು ಕಾರಣವನ್ನು ಮುಂದಿನ ಪದ್ಯ ತಾನು ತಿಳಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

## ಕೆರಳಿದನು ಕೃಷ್ಣ

೧

ಮುದ್ದು ಮಗನನಾ
ಬಾಲ ಕೃಷ್ಣನಾ
ತೊಟ್ಟಿಲೊಳಿಟ್ಟು ತೂಗಿ ತೂಗಿ ತೂಗಿ
ತಾಯಿ ಯಶೋದಾ ದಣಿದು ಬಳಲಿಹೋಗಿ–

"ಬೇಗ ಮಲಗು ಮಗು.
ಸಾಕು ನಿನ್ನ ನಗು.
ಒಲೆಯ ಮೇಲೆ ಏನಾಯ್ತೊ ಕಾಣೆ ಹಾಲು!
ನಿಂತು ನಿಂತು ನನಗಂತು ಹೋಯ್ತು ಕಾಲು!

"ಮಲಗು ಜಾಣಮರಿ"
ಎನಲು ನಕ್ಕು ಹರಿ,
"ಉಹುಂ" ಎಂದು ಮುಂಗುರುಳು ತಲೆಯ ಕೊಡಹಿ
ತುಟಿಗಳಿಂದ ಸವಿ ಮುದ್ದುಮಾತು ಕೆಡಹಿ–

"ಹಾಲಿಗಿಂತ ಕೆನೆ–
ಮೊಸರಿಗಿಂತ ಮನೆ–
ಬೆಣ್ಣೆಗಿಂತ ಸವಿ. ಅಮ್ಮಾ, ಕತೆಯ ತುತ್ತು;
ತೆರೆದ ರೆಪ್ಪೆ ಮುಚ್ಚಲ್ಕೆ ಇದುವೆ ಮುತ್ತು.

"ಅಮ್ಮಾ, ನನ್ನ ನೀ
ನಿನ್ನ ತೊಡೆಯಲಿ
ತೂಗಿ, ಒಳ್ಳೆಯ ಚಿಕ್ಕದೊಂದು ಕತೆಯ
ಹೇಳು; ಮರೆವೆನು ನಿದ್ದೆ ಬರದ ವೆತೆಯ."

Sri Vidyabharathi Book Centre, Sringeri

CC-O. In Public Domain. Digitized by eGangotri



ಎನಲು, ಯಶೋದಾ
"ಓಹೋ! ಹೋದಾ
ಯುಗದ ರಾಮಕಥೆ ಕೇಳಿರುವೆಯ, ಕಣ್ಣ?
ಮತ್ತೆ ಹೇಳುವೆ; ಬೇಗ ಮುಚ್ಚು ಕಣ್ಣ."

ಎಂದು ಮಗನನಪ್ಪಿ
ಅವನ ಮಾತಿಗೊಪ್ಪಿ
ಕತೆಯ ಹೇಳೆ, ಗಾನಕ್ಕೆ ಹೆಡೆಯ ನಾಗ
ತೂಗುವಂತೆ ಹೂಂಗೊಟ್ಟ ಕೃಷ್ಣ ಬೇಗ.

೨

ಹಿಂದಯೋಧ್ಯಾನಗರದಲಿ—ಹುಂ—
ರಾಮಲಕ್ಷ್ಮಣರಿರಲು—ಹುಂ—
ಕರೆಯೆ ವಿಶ್ವಾಮಿತ್ರ, ವನದಲಿ
ಯಜ್ಞರಕ್ಷಣೆಗೈದು—ಹುಂ—

ಮುಂದೆ ಮಿಥಿಲೆಗೆ ಬಂದು, ಸಾಕ್ಷಾತ್
ಶಿವಧನುವ ಮುರಿದಿಕ್ಕಿ—ಹುಂ—
ರಾಮು ಸೀತಾದೇವಿಯನು—ಹುಂ—
ಮದುವೆಯಾದನು ಕಣ್ಣ—ಹುಂ—

ಬಳಿಕ ದಶರಥ ರಾಮನಿಗೆ ಯುವ-
ರಾಜಪಟ್ಟವ ಕಟ್ಟಲು
ಸಂಭ್ರಮಿಸೆ, ಮಂಥರೆಯ ಮಾಟವೆ
ರಾಮನನು ವನಕಟ್ಟಲು—

Sri Vidyabharathi Book Centre, Sringeri

CC-O. In Public Domain. Digitized by eGangotri

ನಿದ್ದೆ ಬಂದಿತೆ ಕಣ್ಣ ?—ಹುಂ, ಹುಂ—
ಮುಂದೆ ವನದಲಿ, ಕಣ್ಣ—ಹುಂ—
ಖಳ ದಶಾನನ ಬಂದು, ಕಣ್ಣಾ,
ಸೀತೆಯನು ಕದ್ಕೊಯ್ದನೋ!

೩

ಎನಲು, ಹೂಂಕರಿಸುತ್ತ ಕೃಷ್ಣ
ತಾಯ ಮಡಿಲಿಂದೆದ್ದು, "ಹೋ!
ಎಲ್ಲಿ ಲಕ್ಷ್ಮಣ, ನನ್ನ ಧನುವೆ–
ಲ್ಲೆಲ್ಲಿ ನನ್ನ ಧನುಸ್ಸು? ಹೋ!"

ಎಂದು ಕೋಪಾಟೋಪದಿಂದೆ–
ದ್ದೆಡಬಲಕೆ ಹರಿದಾಡುತ—
ಬಿಲ್ಲುಬಾಣಗಳೆಲ್ಲಿ ಎನುವಾ
ಬಾಲಕನ ನೆರೆ ನೋಡುತ—

ತಾಯಿ: "ಕಂದನಿಗೇಕೊ ಕಾಣೆನೆ
ಭೀತಿಶಂಕೆ? ಇದೇತಕೀ
ರಾಕ್ಷಸರ ಕತೆ ಹೇಳತೊಡಗಿದೆ?
ನಾನೆ ನಾನೇ ಪಾತಕಿ!"

ಎಂದು, ಅಂದಿನ ರಾಮನೇ ತಾ–
ನಿಂದು ಬಾಲಕರೂಪಿನ
ಕೃಷ್ಣನಾಗಿಹನೆಂಬುದರಿಯದೆ,
ಗೋಕುಲದ ಆ ಕಾಪಿನ—

CC-O. In Public Domain. Digitized by eGangotri

ದೇವರುಗಳಿಗೆ ಹರಕೆ ಹೊತ್ತು
ಶುಭವ ಮಗನಿಗೆ ಕೋರಲು—
ತಾಯ ಕಳವಳ ಕಂಡು, ತಳಮಳ-
ಗೊಂಡು ಹರಿ ನಗುದೋರಲು—

ಬದುಕಿದೆನೊ ನನ್ನಮ್ಮ ಕೃಷ್ಣಾ
ಬದುಕಿದೆನೊ! ನಾ ಬದುಕಿದೆ!
ಮುದ್ದುಮುಖದಲಿ ಮತ್ತೆ ನಗುವನು
ಕಂಡೆನೋ—ನಾ ಬದುಕಿದೆ!

೪

ಎಂದು ಯಶೋದಾದೇವಿ ಮಗನನತಿ-
ಮುದ್ದುಮಾಡಿ ಹಿಗ್ಗಿ,
"ಕತೆಯ ಕೇಳಿ ನೀನೇಕೆ ಬೆಚ್ಚಿದೆ
ಬಿಲ್ಲು ಹುಡುಕಿ ನುಗ್ಗಿ?"

ಎಂದ ತಾಯ ವದನಾರವಿಂದದಲಿ
ಕಣ್ಣ ತುಂಬಿಯಿಟ್ಟು
ಬಂಡನುಂಡು ಮೊಕೆವಂತೆ ಮಂಜುರವ-
ದಿಂದ ಪುಟ್ಟ ಕಿಟ್ಟು:

"ತಾಯೆ! ನಿನ್ನ ಕತೆ ಕೇಳಿ ಮೈಮರೆತೆ!
ದ್ವಾಪರಾಯ್ತು ತ್ರೇತಾ!
ಕಣ್ಗೆ ಕಟ್ಟಿದಂತಾಯ್ತು ಜಾನಕಿಯ
ಹಿಡಿದ ಖಳನ ಪ್ರೇತ!

Sri Vidyabharathi Book Centre, Sringeri

CC-O. In Public Domain. Digitized by eGangotri


"ಹೆಣ್ಣ ನೋಳಿಗೆದೆ ಕಲಕಿ ಕೆರಳಿತು;
ಗಂಡು ವುಂಡುತನಕೆ
ತಿರುಗಿತಲ್ಲ ಎಂದೆನುವ ಮರುಕದಲಿ
ಕ್ಷಾತ್ರ ಬಂತು ಮನಕೆ!"

ಎಂದ ಕಂದನನ್ನಪ್ಪಿ, ತಾಯಿ: "ಮಗು,
ನೂರು ಕಾಲ ಬಾಳು.
ಇದುವೆ ಮರುಕವೀ ಕ್ಷಾತ್ರವಿದನೆ ನೀ
ಬೆಳೆಸಿ, ಲೋಕವಾಳು."

ಎಂದು ಹರಸಿ, "ಕಂದಮ್ಮ, ಮಲಗು ನೀನ್"
ಎಂದು ಕೈಯ ಮುಗಿಯೆ,
ತಾಯ ಮೊರೆಯ ಪರಿಹರಿಸಲೆಂದು ಹರಿ
ನಿದ್ರೆಗೊಡನೆ ನೆಗೆಯೆ—

ಹಿಗ್ಗಿದಳು ತಾನೆಂತೊ ಆ ತಾಯ್
ಅಂತೆ ಹಿಗ್ಗೆಮಗಾಗಲಿ.
ಬೆಚ್ಚುಬೆದರುಗಳೇನೆ ಬಂದರು—
ಬೇಗ ಕರಗಿಯೆ ಹೋಗಲಿ.

ಕೆಲವು ಪದಗಳಿಗೆ ಅರ್ಥ

೧

ದಣಿದು—ಆಯಾಸಪಟ್ಟು. ಮುಂಗುರುಳು—ಹಣೆಯ ಮುಂದಿನ ಕೂದಲು. ಕೊಡಹು—ಆಡಿಸು. ಸವಿ—ಕೆವಿಗೆ ಇಂಪಾದದ್ದು. ತೆರೆದ ರೆಪ್ಪೆ ಮುಚ್ಚು—ನಿದ್ರೆಯನ್ನು ಉಂಟುಮಾಡು. ವೆತೆ—ವ್ಯಥೆ, ತೊಂದರೆ. ಹೋದಾ—ಹಿಂದಿನ. ಕಣ್ಣ—ಕೃಷ್ಣ. ಕಣ್ಣ—ಕಣ್ಣನ್ನು. ನಾಗ—ನಾಗರ ಹಾವು. ತೂಗು—ಆಕಡೆಯಿಂದ ಈಕಡೆಗೆ ಆಡಿಸು.

CC-O. In Public Domain. Digitized by eGangotri


೨

ವನ—ಕಾಡು. ರಕ್ಷಣೆಗೈ—ತೊಂದರೆಯಾಗದಂತೆ ಕಾಪಾಡು. ಧನು—ಧನುಸ್ಸು, ಬಿಲ್ಲು. ಸಾಕ್ಷಾತ್—ಕಣ್ಣೆದುರಿನ. ಕಣ್ಣ—ಕೃಷ್ಣ. ಸಂಭ್ರಮಿಸು—ಉತ್ಸಾಹಪಡು. ಮಾಟ—ಮಾಡಿದ ಕೆಲಸ. ಖಳ—ಕೆಟ್ಟವನು. ದಶಾನನ—ರಾವಣ. ಕದ್ದು ಒಯ್ಯಿ—ಕದ್ದುಕೊಂಡು ಹೋಗು.

೩

ಹೂಂಕರಿಸು—ಕೋಪದಿಂದ ಹೂಂಗುಟ್ಟು, ಧನು—ಬಿಲ್ಲು. ಕೋಪಾಟೋಪ—ಹೆಚ್ಚಾದ ಕೋಪ. ಹರಿದಾಡು—ಓಡಿಯಾಡು. ನೆರೆ—ಚೆನ್ನಾಗಿ, ಕಣ್ಣು ತುಂಬ. ಭೀತಿಶಂಕೆ—ಹೆದರಿಕೆ, ಬೆಚ್ಚು. ಪಾತಕಿ—ಪಾಪಿ. ಅರಿಯದೆ—ತಿಳಿಯದೆ. ಕಾಸಿನ—ಕಾಪಾಡುವ. ತಳವುಳ—ವ್ಯಥೆ.

೪

ವದನಾರವಿಂದ—ಕಮಲದ ಹಾಗಿರುವ ಮುಖ. ಕಣ್ಣು ತುಂಬಿ—ಕಣ್ಣೆಂಬದುಂಬಿ; ಕಣ್ಣನ್ನು ತುಂಬಾ. ಬಂಡನು – ಹೂವಿನ ಜೇನನ್ನು. ಉಂಡು—ಕುಡಿದು. ಮೊರೆ—ಝೇಂಕಾರಮಾಡು. ಮಂಜು—ಕಿವಿಗೆ ಹಿತವಾದ. ರವ—ಶಬ್ದ. ಖಳ—ಕೆಟ್ಟವನು. ಪ್ರೇತ—ಸತ್ತವನ ಆಕಾರ. ಗೋಳು—ದುಃಖ. ಕೆರಳು—ಕೋಪ. ಪುಂಡತನ—ಕೆಟ್ಟನಡತೆ. ಮರುಕ—ದಯೆ. ಕ್ಷಾತ್ರ—ಕೋಪ. ಮೊರೆ—ಪ್ರಾರ್ಥನೆ. ಹಿಗ್ಗು—ಸಂತೋಷಪಡು.

———

Sri Vidyabharathi Book Centre, Sringeri

CC-O. In Public Domain. Digitized by eGangotri

# ಗಣಪತಿಯನ್ನೂ ಕೃಷ್ಣನನ್ನೂ ಕುರಿತ ಕೆಲವು ಸ್ತೋತ್ರಗಳು


ಪುಟ

೧. ಶ್ರೀ ಗಣಪತಿ ಸ್ತೋತ್ರ .... ೩೪

೨. ಸೊಗಸು ಗೋಪಾಲ .... ೩೬

೩. ಶ್ರೀ ಕೃಷ್ಣನ ಅವತಾರ .... ೩೮

೪. ಕೃಷ್ಣಂ ವಂದೇ ಜಗದ್ಗುರುಂ .... ೩೯


Sri Vidyabharathi Book Centre, Sringeri

CC-O. In Public Domain. Digitized by eGangotri

# ಶ್ರೀ ಗಣಪತಿ ಸ್ತೋತ್ರ

ನಾರದ ಉವಾಚ:

೧. ಪ್ರಣಮ್ಯ ಶಿರಸಾ ದೇವಂ ಗೌರೀಪುತ್ರಂ ವಿನಾಯಕಂ
ಭಕ್ತಾವಾಸಂ ಸ್ಮರೇನ್ನಿತ್ಯಂ ಆಯುಃಕಾಮಾರ್ಥಸಿದ್ಧಯೇ.

೨. ಪ್ರಥಮಂ **ವಕ್ರತುಂಡಂ** ಚ **ವಿಕದಂತಂ** ದ್ವಿತೀಯಕಂ
ತೃತೀಯಂ **ಕೃಷ್ಣಪಿಂಗಾಕ್ಷಂ ಗಜವಕ್ತ್ರಂ** ಚತುರ್ಥಕಂ,

೩. ಲಂಬೋದರಂ ಪಂಚಮಂ ಚ ಷಷ್ಠಂ **ವಿಕಟಮೇವ** ಚ
ಸಪ್ತಮಂ **ವಿಘ್ನರಾಜಂ** ಚ **ಧೂಮವರ್ಣಂ** ತಥಾಷ್ಟಮಂ,

೪. ನವಮಂ **ಭಾಲಚಂದ್ರಂ** ಚ ದಶಮಂ ತು **ವಿನಾಯಕಂ**
ಏಕಾದಶಂ **ಗಣಪತಿಂ** ದ್ವಾದಶಂ ತು **ಗಜಾನನಂ,**

೫. ದ್ವಾದಶೈತಾನಿ ನಾಮಾನಿ ತ್ರಿಸಂಧ್ಯಂ ಯಃ ಪಠೇನ್ನರಃ
ನ ಚ ವಿಘ್ನಭಯಂ ತಸ್ಯ ಸರ್ವಸಿದ್ಧಿಕರಂ ಪರಂ.

೬. ವಿದ್ಯಾರ್ಥೀ ಲಭತೇ ವಿದ್ಯಾಂ ಧನಾರ್ಥೀ ಲಭತೇ ಧನಂ,
ಪುತ್ರಾರ್ಥೀ ಲಭತೇ ಪುತ್ರಾನ್ ಮೋಕ್ಷಾರ್ಥೀ ಲಭತೇ ಗತಿಂ.

೭. ಜಪೇದ್ ಗಣಪತಿಸ್ತೋತ್ರಂ ಷಡ್ಭಿರ್ಮಾಸೈಃ ಫಲಂ ಲಭೇತ್,
ಸಂವತ್ಸರೇಣ ಸಿದ್ಧಿಂ ಚ ಲಭತೇ ನಾತ್ರ ಸಂಶಯಃ.

೮. ಅಷ್ಟಾನಾಂ ಬ್ರಾಹ್ಮಣಾನಾಂ ಚ ಲಿಖಿತ್ವಾ ಯಃ ಸಮರ್ಪಯೇತ್,
ತಸ್ಯ ವಿದ್ಯಾ ಭವೇತ್ ಸದ್ಯೋ ಗಣೇಶಸ್ಯ ಪ್ರಸಾದತಃ.

ಇತಿ ಶ್ರೀ ನಾರದಪುರಾಣೇ ಸಂಕಟನಾಶನಂ ನಾಮ
ಗಣಪತಿ ಸ್ತೋತ್ರಂ ಸಂಪೂರ್ಣಂ.

Sri Vidyabharati Foundation, Sringeri

CC-0. In Public Domain. Digitized by eGangotri


ನಾರದನು ಹೇಳಿದನು :

೧. ಗೌರಿಯ ಮಗನೂ ಭಕ್ತರಿಗೆ ಆಶ್ರಯ ಕೊಡುವವನೂ ಆದ ವಿನಾಯಕದೇವನಿಗೆ ತಲೆಯನ್ನು ಬಾಗಿಸಿ, ಆಯುಸ್ಸು ಕಾಮ ಅರ್ಥಗಳ ಸಿದ್ಧಿಗಾಗಿ ಅವನನ್ನು ನಿತ್ಯವೂ ಸ್ಮರಿಸಲಿ.

೨. ಮೊದಲು, **ವಕ್ರತುಂಡ** (ಕೊಂಕಿದ ಸೊಂಡಿಲುಳ್ಳವನು) ಎಂದು; ಎರಡನೆಯದಾಗಿ, **ವಿಕದಂತ** (ಒಂದೇ ಕೊಂಬು ಉಳ್ಳವನು) ಎಂದು; ಮೂರನೆಯದಾಗಿ, **ಕೃಷ್ಣಪಿಂಗಾಕ್ಷ** (ಕಂದು ಬಣ್ಣದ ಕಣ್ಣುಳ್ಳವನು) ಎಂದು; ನಾಲ್ಕನೆಯದಾಗಿ, **ಗಜವಕ್ತ್ರ** (ಆನೆಯ ಮುಖವುಳ್ಳವನು) ಎಂದು;

೩. ಐದನೆಯದಾಗಿ, **ಲಂಬೋದರ** (ಡೊಳ್ಳು ಹೊಟ್ಟೆಯವನು) ಎಂದು; ಆರನೆಯದಾಗಿ, **ವಿಕಟ** (ವಿಕಾರವಾದವನು) ಎಂದು; ಏಳನೆಯದಾಗಿ, **ವಿಘ್ನರಾಜ** (ವಿಘ್ನಗಳಿಗೆಲ್ಲ ದೊರೆಯಾದವನು) ಎಂದು; ಎಂಟನೆಯದಾಗಿ, **ಧೂಮ್ರವರ್ಣ** (ಹೊಗೆಯ ಬಣ್ಣದವನು) ಎಂದು;

೪. ಒಂಬತ್ತನೆಯದಾಗಿ, **ಭಾಲಚಂದ್ರ** (ನೆತ್ತಿಯಲ್ಲಿ ಚಂದ್ರನುಳ್ಳವನು) ಎಂದು; ಹತ್ತನೆಯದಾಗಿ **ವಿನಾಯಕ** (ಇತರರನ್ನು ನಡಸುವವನೆ ಹೊರತು, ತಾನು ಯಾರನ್ನೂ ಹಿಂಬಾಲಿಸುವವನಲ್ಲ) ಎಂದು; ಹನ್ನೊಂದನೆಯದಾಗಿ, **ಗಣಪತಿ** (ಗಣಗಳಿಗೆ ಒಡೆಯನಾದವನು) ಎಂದು; ಹನ್ನೆರಡನೆಯದಾಗಿ, **ಗಜಾನನ** (ಆನೆಯ ಮುಖದವನು) ಎಂದು;

೫. ಈ ಹನ್ನೆರಡು ಹೆಸರುಗಳನ್ನು (ಬೆಳಗ್ಗೆ ಮಧ್ಯಾಹ್ನ ಸಂಜೆ ಎಂಬ) ಮೂರು ಸಂಧ್ಯೆಗಳಲ್ಲೂ ಯಾವ ಮನುಷ್ಯನು ಪಠನಮಾಡುವನೋ ಅವನಿಗೆ ವಿಘ್ನದ ಭಯವಿರುವುದಿಲ್ಲ; ಉತ್ತಮವಾದ ಸರ್ವ ಸಿದ್ಧಿಗಳೂ ಉಂಟಾಗುತ್ತವೆ.

೬. ವಿದ್ಯೆ ಬೇಕೆಂದವನು ವಿದ್ಯೆ ಪಡೆಯುತ್ತಾನೆ; ಧನ ಬೇಕೆಂದವನು ಧನ ಪಡೆಯುತ್ತಾನೆ; ಮಕ್ಕಳು ಬೇಕೆಂದವನು ಮಕ್ಕಳು ಪಡೆಯುತ್ತಾನೆ; ಮೋಕ್ಷ ಬೇಕೆಂದವನು ಗತಿಯನ್ನು ಪಡೆಯುತ್ತಾನೆ.

೭. ಈ ಗಣಪತಿಯ ಸ್ತೋತ್ರವನ್ನು ಜಪಮಾಡುವವನು ತಾನು ಬಯಸಿದ ಫಲವನ್ನು ಆರು ತಿಂಗಳಲ್ಲಿ ಪಡೆಯುವನು, ಒಂದು ವರ್ಷದಲ್ಲಿ ಸಿದ್ಧಿಯನ್ನು ಪಡೆಯುವನು, ಇದರಲ್ಲಿ ಏನೂ ಸಂಶಯವಿಲ್ಲ.

೮. ಎಂಟು ಜನ ಬ್ರಾಹ್ಮಣರಿಗೆ ಇದನ್ನು ಬರೆದು ಸಮರ್ಪಿಸಿದವನಿಗೆ ಗಣೇಶನ ಪ್ರಸಾದದಿಂದ, ವಿದ್ಯೆ ಆಗುವುದು.

CC-O. In Public Domain. Digitized by eGangotri

# ಸೊಗಸು ಗೋಪಾಲ

ಸೊಗಸುಗೋಪಾಲನಿಗೆ ಶುಭಮಂಗಳಂ !
ಜಗದೇಕಮೋಹನಗೆ ಜಯಮಂಗಳಂ ॥ ಪ ॥

ಸಿರಿವೆತ್ತ ಮೆಲ್ಲಡಿಯ ಚೆಲ್ವಿಕೆಗೆ ಮಂಗಳಂ।
ತೆರೆಮಸಗುವುಗುರ ಕಾಂತಿಗೆ ಮಂಗಳಂ।
ಕರಮೆಸೆವ ಕಿರುದೊಡೆಯ ಗಾಡಿಗುರಿ ಮಂಗಳಂ।
ಸಿರಿಮಲಗುದೊಡೆವೊಗರ ಸೇರುವೆಗೆ ಮಂಗಳಂ ॥ ೧ ॥

ಪೊಸದೇಸೆಯಿಂದುಟ್ಟ ಪೊನ್ನುಡಿಗೆ ಮಂಗಳಂ।
ಬಿಸಜದಿಂದೆಸೆವ ನಾಭಿಗೆ ಮಂಗಳಂ।
ಮಿಸುಪ ಕೆಂಬರಲಿಂದೆ ಮೆರೆವೆರ್ದೆಗೆ ಮಂಗಳಂ।
ಒಸೆದು ಧರಿಸಿದ ತುಳಸಿಯೊಳುಸರಕೆ ಮಂಗಳಂ ॥ ೨ ॥

ಚೆಲುವ ಪಾರುಂಬಳೆಯ ಸಿಂಗರಕೆ ಮಂಗಳಂ।
ಬಲಮುರಿಯ ಸಂಕದೊಪ್ಪಕೆ ಮಂಗಳಂ।
ಉಲಿವ ಪೊಂಗೊಳಲ ಮೆಲ್ಲುಲಿಗಳಿಗೆ ಮಂಗಳಂ।
ನಲಿನಲಿವ ಮಕರಕುಂಡಲಗಳಿಗೆ ಮಂಗಳಂ ॥ ೩ ॥

ಮುಗುಳುನಗೆ ಬಗೆಗೊಳುವ ಮೊಗಸಸಿಗೆ ಮಂಗಳಂ।
ಪೊಗರುಗುವ ಕದಪಿನೋಜೆಗೆ ಮಂಗಳಂ।
ಮಗಮಗಿಪ ಉಸಿರ ಪರಿಮಳಕೆ ಮಿಗೆ ಮಂಗಳಂ।
ಬೊಗಸೆಗಣ್ಗಳ ತಣ್ಪುವಗೆಗಳಿಗೆ ಮಂಗಳಂ ॥ ೪ ॥

ಸಕಲಲೋಕವ ಪೊರೆವ ಸೈರಣೆಗೆ ಮಂಗಳಂ।
ಅಕಳಂಕಗುಣಸಮೂಹಕೆ ಮಂಗಳಂ।
ಚಿಕದೇವರಾಯನಿಗೆ ಚಿಂತಿತಾರ್ಥವನೀವ।
ಸುಕರಗೋಪಾಲನಿಗೆ ಶೋಭನಂ ಮಂಗಳಂ ॥ ೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

## " ಸೊಗಸು ಗೋಪಾಲ " ಕವನದ ಕೆಲವು ಪದಗಳಿಗೆ ಅರ್ಥ.

೧. ಸಿರಿವೆತ್ತ–ಕಾಂತಿಯನ್ನು ಪಡೆದ, ಸುಂದರವಾದ. ಮೆಲ್ಲಡಿ–ಮೃದುವಾದ ಪಾದ. ತೆರೆಮಸಗುವ–ಅಲೆಅಲೆಯಾಗಿ ಬರುವ. ಉಗುರ–ಕಾಲುಗುರುಗಳ. ಕರಂ ಎಸೆವ–ತುಂಬಾ ಹೊಳೆಯುವ. ಗಾಡಿ–ತೀವ್ರ. ಕಿರುತೊಡೆ–ಮಂಡಿಯಿಂದ ಕೆಳಗಿನ ಭಾಗ. ಸಿರಿಮಲಗು ದೊಡೆವೊಗರು–ಲಕ್ಷ್ಮಿಯು ಮಲಗುವ ತೊಡೆಯ ಕಾಂತಿ. ಸೇರುವೆ–ಹೊಂದಿಕೆ.

೨. ಪೊಸದೇಸೆ–ಹೊಸರೀತಿ. ಪೊನ್ನುಡೆ–ಹೊಂಬಣ್ಣದ ವಸ್ತ್ರ, ಪೀತಾಂಬರ. ಬಿಸಜ–ತಾವರೆ. ಎಸೆವ–ಕಂಗೊಳಿಸುವ. ನಾಭಿ–ಹೊಕ್ಕುಳು. ಮಿಸುಪ–ಹೊಳೆಯುವ. ಕೆಂಬರಲು–ಕೆಂಪು ಕಲ್ಲು, ಕೌಸ್ತುಭ. ಎರ್ದೆ–ಎದೆ. ಒಳುಸರ–ಒಳ್ಳೆಯ ಮಾಲೆ. ಒಸೆದು–ಪ್ರೀತಿಪಟ್ಟು.

೩. ಪಾರುಂಬಳೆ–ಹಾರುವ ಬಳೆ, ಚಕ್ರ. ಸಿಂಗರ–ಶೃಂಗಾರ, ಬಲಮುರಿ–ಬಲದ ಕಡೆಗೆ ತಿರಿಚಿಕೊಂಡಿರುವ. ಸಂಕ–ಶಂಖ. ಒಪ್ಪ–ಸೊಗಸು. ಉಲಿವ–ಧ್ವನಿಮಾಡುವ. ಪೊಂಗೊಳಲು–ಚಿನ್ನದ ಕೊಳಲು. ಮೆಲ್ಲುಲಿ–ಮೃದುವಾದ ಧ್ವನಿ. ಮಕರಕುಂಡಲ–ಮೀನಿನ ಆಕಾರದ ಕಿವಿಯೊಡವೆ.

೪. ಬಗೆಗೊಳುವ–ಮನಸ್ಸನ್ನು ಮೆಚ್ಚಿಸುವ. ಮೊಗಸಸಿ–ಚಂದ್ರನಂಥ ಮುಖ. ಪೊಗರು ಉಗುವ–ಕಾಂತಿ ಉಕ್ಕುವ. ಕದಪಿನ ಓಜೆ–ಕೆನ್ನೆಯ ವರ್ಚಸ್ಸು. ಮಗಮಗಿಪ–ಸುವಾಸನೆಯುಳ್ಳ. ಪರಿಮಳ–ಸುಗಂಧ. ಬೊಗಸೆ–ಅದರಷ್ಟು ವಿಶಾಲವಾದ. ತಣ್ಪುಬಗೆ–ತಂಪಾದ ಮನಸ್ಸು.

೫. ಪೊರೆ–ಕಾಪಾಡು. ಅಕಳಂಕ–ದೋಷವಿಲ್ಲದ. ಸಮೂಹ–ಗುಂಪು. ಚಿಕದೇವರಾಯ–ಈ ಕವನವನ್ನು ಬರೆದ ಮೈಸೂರಿನ ರಾಜರು. ಚಿಂತಿತಾರ್ಥ–ಇಷ್ಟಾರ್ಥ, ಬಯಸಿದ್ದು. ಸುಕರ–ಒಳ್ಳೆಯದನ್ನು ಮಾಡುವ. ಶೋಭನ–ಶುಭ, ಮಂಗಳ.

Sri Vidyabharathi Book Centre, Sringeri

CC-O. In Public Domain. Digitized by eGangotri

# ಶ್ರೀ ಕೃಷ್ಣನ ಅವತಾರ

ತಮದ್ಭುತಂ ಬಾಲಕಮಂಬುಜೇಕ್ಷಣಂ
ಚತುರ್ಭುಜಂ ಶಂಖಗದಾದ್ಯುದಾಯುಧಂ।
ಶ್ರೀವತ್ಸಲಕ್ಷ್ಮಂ ಗಳಶೋಭಿಕೌಸ್ತುಭಂ
ಪೀತಾಂಬರಂ ಸಾಂದ್ರಪಯೋದಸೌಭಗಮ್ ॥
ಮಹಾರ್ಹವೈಡೂರ್ಯಕಿರೀಟಕುಂಡಲ-
ತ್ವಿಷಾ ಪರಿಷ್ವಕ್ತಸಹಸ್ರಕುಂತಲಮ್।
ಉದ್ದಾಮ ಕಾಂಚ್ಯಂಗದಕಂಕಣಾದಿಭಿಃ
ವಿರೋಚಮಾನಂ ವಸುದೇವ ಐಕ್ಷತ ॥

ಆ ಅದ್ಭುತನಾದ ಬಾಲಕನಿಗೆ ಕಮಲದಂತೆ ಕಣ್ಣುಗಳು.
ತನ್ನ ನಾಲ್ಕು ತೋಳುಗಳಲ್ಲಿ
ಶಂಖ ಗದೆ ಮುಂತಾದ ಆಯುಧಗಳನ್ನು ಎತ್ತಿದ್ದಾನೆ.
ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆ.
ಕೊರಳಲ್ಲಿ ತೊಳಗುವ ಕೌಸ್ತುಭ.
ಪೀತಾಂಬರವನ್ನು ಉಟ್ಟಿದ್ದಾನೆ.
ನೀರು ತುಂಬಿದ ಮೋಡದಂತೆ ಸುಂದರನಾಗಿದ್ದಾನೆ.
ತುಂಬ ಬೆಲೆಯುಳ್ಳ ವೈಡೂರ್ಯಗಳಿಂದ ಆದ
ಕಿರೀಟಕುಂಡಲಗಳ ಕಾಂತಿ
ಅತನ ಸಾವಿರಾರು ಮುಂಗುರುಳುಗಳನ್ನು ತಬ್ಬಿಕೊಂಡಿದೆ.
ದೊಡ್ಡ ನಡುಪಟ್ಟಿ, ತೋಳುಬಳೆ, ಕೈಯ ಕಡಗ
ಇವುಗಳಿಂದ ಬೆಳಗುವ ಬಾಲಕನನ್ನು ವಸುದೇವನು ಈಕ್ಷಿಸಿದನು.

[ ಶ್ರೀಮದ್ಭಾಗವತದಿಂದ ]

Sri Vidyabharathi Book Centre, Sringeri

CC-O. In Public Domain. Digitized by eGangotri

# ಕೃಷ್ಣಂ ವಂದೇ ಜಗದ್ಗುರುಂ

೧

ವಸುದೇವಸುತಂ ದೇವಂ ಕಂಸಚಾಣೂರಮರ್ದನಂ
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ

ವಸುದೇವನ ಮಗನಾದ ದೇವನನ್ನು, ಕಂಸಚಾಣೂರರನ್ನು ಮರ್ದನ ಮಾಡಿದವನನ್ನು, ದೇವಕಿಗೆ ಪರಮಾನಂದ ಉಂಟುಮಾಡಿದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೨

ಅತಸೀಪುಷ್ಪಸಂಕಾಶಂ ಹಾರನೂಪುರಶೋಭಿತಂ
ರತ್ನಕಂಕಣಕೇಯೂರಂ ಕೃಷ್ಣಂ ವಂದೇ ಜಗದ್ಗುರುಂ

ಕರಿಯಗಸೆಯ ಹೂವಿನ ಕಾಂತಿಯುಳ್ಳವನನ್ನು, ಕೊರಳಹಾರದಿಂದಲೂ ಕಾಲುಗೆಜ್ಜೆಗಳಿಂದಲೂ ಕಂಗೊಳಿಸುವವನನ್ನು, ರತ್ನದ ಕೈಬಳೆಗಳು ಭುಜಕೀರ್ತಿಗಳು ಉಳ್ಳವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೩

ಕುಟಿಲಾಲಕಸಂಯುಕ್ತಂ ಪೂರ್ಣಚಂದ್ರನಿಭಾನನಂ
ವಿಲಸತ್ಕುಂಡಲಧರಂ ಕೃಷ್ಣಂ ವಂದೇ ಜಗದ್ಗುರುಂ

ಗುಂಗುರಾದ ಮುಂಗುರುಳುಗಳಿಂದ ಕೂಡಿದವನನ್ನು, ಪೂರ್ಣ ಚಂದ್ರನಿಗೆ ಸಮಾನವಾದ ಮುಖವುಳ್ಳವನನ್ನು, ಹೊಳೆಯುವ ಕಿವಿಯೊಡವೆಗಳನ್ನು ಧರಿಸಿದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೪

ಮುಂದಾರಗಂಧಸಂಯುಕ್ತಂ ಚಾರುಹಾಸಂ ಚತುರ್ಭುಜಂ
ಬರ್ಹಿಪಿಂಛಾವಚೂಡಾಂಕಂ ಕೃಷ್ಣಂ ವಂದೇ ಜಗದ್ಗುರುಂ

ಮುಂದಾರಪುಷ್ಪದ ಗಂಧದಿಂದ ಕೂಡಿದವನನ್ನು, ಮನೋಹರವಾದ ನಗುವುಳ್ಳವನನ್ನು, ನಾಲ್ಕು ಭುಜಗಳು ಪಡೆದವನನ್ನು, ತಲೆಯ ಕೂದಲಿನಲ್ಲಿ ನವಿಲುಗರಿ ಸಿಕ್ಕಿಸಿದವನನ್ನು— ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

CC-O. In Public Domain. Digitized by eGangotri

೫

ಉತ್ಫುಲ್ಲಪದ್ಮಪತ್ರಾಕ್ಷಂ ನೀಲಜೀಮೂತಸನ್ನಿಭಂ
ಯಾದವಾನಾಂ ಶಿರೋರತ್ನಂ ಕೃಷ್ಣಂ ವಂದೇ ಜಗದ್ಗುರುಂ

ಚೆನ್ನಾಗಿ ಅರಳಿದ ಪದ್ಮದ ದಳದಂತೆ ಕಣ್ಣುಗಳುಳ್ಳವನನ್ನು, ನೀಲಿಯ ಮೇಘಕ್ಕೆ ಸಮಾನವಾದ ಮೈಯುಳ್ಳವನನ್ನು, ಯಾದವರ ಕುಲಕ್ಕೆ ತಲೆಯೊಡವೆಯಾದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೬

ರುಕ್ಮಿಣೀಕೇಳಿಸಂಯುಕ್ತಂ ಪೀತಾಂಬರಸುಶೋಭಿತಂ
ಅವಾಪ್ತತುಲಸೀಗಂಧಂ ಕೃಷ್ಣಂ ವಂದೇ ಜಗದ್ಗುರುಂ

ರುಕ್ಮಿಣಿಯೊಡನೆ ಕೂಡಿ ಆಡುತ್ತಿರುವವನನ್ನು, ಪೀತಾಂಬರದಿಂದ ಕಂಗೊಳಿಸುವವನನ್ನು, ತುಲಸಿಯ ಗಂಧವನ್ನು ಹೊಂದಿದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೭

ಗೋಪಿಕಾನಾಂ ಕುಚದ್ವಂದ್ವಕುಂಕುಮಾಂಕಿತವಕ್ಷಸಂ
ಶ್ರೀನಿಕೇತಂ ಮಹೇಷ್ವಾಸಂ ಕೃಷ್ಣಂ ವಂದೇ ಜಗದ್ಗುರುಂ

ಗೋಪಾಲಕಿಯರ ಕುಚದ್ವಂದ್ವಗಳ ಕುಂಕುಮದಿಂದ ಅಲಂಕರಿಸಲ್ಪಟ್ಟ ವಕ್ಷಃಸ್ಥಲವುಳ್ಳವನನ್ನು, ಲಕ್ಷ್ಮಿಗೆ (ತನ್ನ ವಕ್ಷಃಸ್ಥಲವೇ) ಮನೆಯಾದವನನ್ನು, ಮಹಾಧನುರ್ಧರನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೮

ಶ್ರೀವತ್ಸಾಂಕಂ ಮಹೋರಸ್ಕಂ ವನಮಾಲಾವಿರಾಜಿತಂ
ಶಂಖಚಕ್ರಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಂ

ಶ್ರೀವತ್ಸದ ಗುರುತು ಉಳ್ಳವನನ್ನು, ವಿಶಾಲವಾದ ವಕ್ಷವುಳ್ಳವನನ್ನು ವನಮಾಲೆಯಿಂದ ವಿರಾಜಿತನಾದವನನ್ನು, ಶಂಕಚಕ್ರಗಳನ್ನು ಧರಿಸಿದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

CC-O. In Public Domain. Digitized by eGangotri

## "ಸೊಗಸು ಗೋಪಾಲ" ಕವನದ ಕೆಲವು ಪದಗಳಿಗೆ ಅರ್ಥ.

೧. ಸಿರಿವೆತ್ತ–ಕಾಂತಿಯನ್ನು ಪಡೆದ, ಸುಂದರವಾದ. ಮೆಲ್ಲಡಿ–ಮೃದುವಾದ ಪಾದ. ತೆರೆಮಸಗುವ–ಅಲೆಅಲೆಯಾಗಿ ಬರುವ. ಉಗುರ–ಕಾಲುಗುರುಗಳ. ಕರಂ ಎಸೆನ–ತುಂಬಾ ಹೊಳೆಯುವ. ಗಾಡಿ–ಠೀವಿ. ಕಿರುತೊಡೆ–ಮಂಡಿಯಿಂದ ಕೆಳಗಿನ ಭಾಗ. ಸಿರಿಮಲಗು ದೊಡೆವೊಗರು–ಲಕ್ಷ್ಮಿಯು ಮಲಗುವ ತೊಡೆಯ ಕಾಂತಿ. ಸೇರುವೆ–ಹೊಂದಿಕೆ.

೨. ಪೊಸದೇಸೆ–ಹೊಸರೀತಿ. ಪೊನ್ನುಡೆ–ಹೊಂಬಣ್ಣದ ವಸ್ತ್ರ, ಪೀತಾಂಬರ. ಬಿಸಜ–ತಾವರೆ. ಎಸೆವ–ಕಂಗೊಳಿಸುವ. ನಾಭಿ–ಹೊಕ್ಕುಳು. ಮಿಸುಪ–ಹೊಳೆಯುವ. ಕೆಂಬರಲು–ಕೆಂಪು ಕಲ್ಲು, ಕೌಸ್ತುಭ. ಎರ್ದೆ–ಎದೆ. ಒಳುಸರ–ಒಳ್ಳೆಯ ಮಾಲೆ. ಒಸೆದು–ಪ್ರೀತಿಪಟ್ಟು.

೩. ಪಾರುಂಬಳೆ–ಹಾರುವ ಬಳೆ, ಚಕ್ರ. ಸಿಂಗರ–ಶೃಂಗಾರ. ಬಲಮುರಿ–ಬಲದ ಕಡೆಗೆ ತಿರಿಚಿಕೊಂಡಿರುವ. ಸಂಕ–ಶಂಖ. ಒಪ್ಪ–ಸೊಗಸು. ಉಲಿವ–ಧ್ವನಿಮಾಡುವ. ಪೊಂಗೊಳಲು–ಚಿನ್ನದ ಕೊಳಲು. ಮೆಲ್ಲುಲಿ–ಮೃದುವಾದ ಧ್ವನಿ. ಮಕರಕುಂಡಲ–ಮೀನಿನ ಆಕಾರದ ಕಿವಿಯೊಡವೆ.

೪. ಬಗೆಗೊಳುವ–ಮನಸ್ಸನ್ನು ಮೆಚ್ಚಿಸುವ. ಮೊಗಸಸಿ–ಚಂದ್ರನಂಥ ಮುಖ. ಪೊಗರು ಉಗುವ–ಕಾಂತಿ ಉಕ್ಕುವ. ಕದಪಿನ ಒಜೆ–ಕೆನ್ನೆಯ ವರ್ಚಸ್ಸು. ಮಗಮಗಿಪ–ಸುವಾಸನೆಯುಳ್ಳ. ಪರಿಮಳ–ಸುಗಂಧ. ಬೊಗಸೆ–ಅವರಷ್ಟು ವಿಶಾಲವಾದ. ತಣ್ಪುಬಗೆ–ತಂಪಾದ ಮನಸ್ಸು.

೫. ಪೊರೆ–ಕಾಪಾಡು. ಅಕಳಂಕ–ದೋಷವಿಲ್ಲದ. ಸಮೂಹ–ಗುಂಪು. ಚಿಕದೇವರಾಯ–ಈ ಕವನವನ್ನು ಬರೆದ ಮೈಸೂರಿನ ರಾಜರು. ಚಿಂತಿತಾರ್ಥ–ಇಷ್ಟಾರ್ಥ, ಬಯಸಿದ್ದು. ಸುಕರ–ಒಳ್ಳೆಯದನ್ನು ಮಾಡುವ. ಶೋಭನ–ಶುಭ, ಮಂಗಳ.

CC-O. In Public Domain. Digitized by eGangotri

## ಗುಬ್ಬಚ್ಚಿ ಪುಸ್ತಕಮಾಲೆ

ಸಣ್ಣ ಮಕ್ಕಳಿಗೆ
ಬಾಯಿಗೆ ಹಿತವಾದ ಭಾಷೆ
ಮನಸ್ಸಿಗೆ ಹಿತವಾದ ಭಾವ
ಕಣ್ಣಿಗೆ ಹಿತವಾದ ಮುದ್ರಣ
ಕೈಗೆ ಹಿತವಾದ ಕಾಗದ

ಶಾಕ್ಯ ಸಾಹಿತ್ಯ ಮಂಟಪ
(ಡಾ॥ ಜಿ. ಪಿ. ರಾಜರತ್ನಂ ಸ್ಮಾರಕ)
14/3, 17ನೇ ಅಡ್ಡರಸ್ತೆ
ಮಲ್ಲೇಶ್ವರಂ
ಬೆಂಗಳೂರು - 560 055

Sri Vidyabharathi Book Centre, Sringeri